# ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 22 ಜೂನ್ 1, 1986 ಬೆಲೆ 80 ಪೈಸೆ

## ವರ್ಣಬೇಧ ನೀತಿಯ ವಿರುದ್ಧ ಅಖಿಲಭಾರತ ದಿನಾಚರಣೆ

ದಕ್ಷಿಣ ಆಫ್ರಿಕದ ಬೋಥಾ ಸರಕಾರ ಅನುಸರಿಸುತ್ತಿರುವ ವರ್ಣಬೇಧ ನೀತಿಯ ವಿರುದ್ಧವಾಗಿ, ಆ ಸರಕಾರವು ದಕ್ಷಿಣ ಆಫ್ರಿಕದ ಜನರ ಹೋರಾಟವನ್ನು ಪಾಶವೀ ರೀತಿಯಲ್ಲಿ ದಮನ ಮಾಡುತ್ತಿರುವುದರ ವಿರುದ್ಧವಾಗಿ, ದಕ್ಷಿಣ ಆಫ್ರಿಕದ ಜನರ ವಿಮೋಚನಾ ಹೋರಾಟಕ್ಕೆ ಬೆಂಬಲ ಕೊಡಲು ಕೇಂದ್ರ ಕಾರ್ಮಿಕ ಸಂಘಟನೆಗಳು 16-6-86 ರಂದು ಅಖಿಲ ಭಾರತ ದಿನಾಚರಣೆ ಆಚರಿಸಬೇಕೆಂದು ಕರೆ ಕೊಟ್ಟಿವೆ.

### ಅಖಿಲ ಭಾರತ ಕಿಸಾನ್ ಸಭೆಯ ಒಕ್ಕೊರಲಿನ ಕರೆ

# ಭೂ-ಮಾಲಿಕ, ಗುತ್ತೇದಾರರಿಂದ ರೈತರ ಶೋಷಣೆ ನಿಲ್ಲಲಿ

ರೈತ ಸಮೂಹವನ್ನು ಭೂಮಾಲಕರ, ಗುತ್ತೇದಾರರ, ದೊಡ್ಡ ವ್ಯಾಪಾರಸ್ಥರ, ಬಡ್ಡಿ ವ್ಯವಹಾರಿಗಳ ಶೋಷಣೆಯಿಂದ ಮುಕ್ತಗೊಳಿಸಿರಿ; ನಮ್ಮನ್ನಗಲಿದ ವೀರ ಮುಖಂಡರ ಗುರಿಯನ್ನು ಸಾಧಿಸಲು ಮುಂದಾಗಿ ಹೋರಾಡೋಣ, ಭಾರತದಲ್ಲಿ ಭೂಮಿಗೆ ಸಂಬಂಧಪಟ್ಟಂಥ ಕ್ರಾಂತಿ ಚಿರಾಯುವಾಗಲಿ ಎಂಬ ಗಗನಚುಂಬಿ ಘೋಷಣೆಗಳ ಮಧ್ಯೆ 50 ವರ್ಷ ತುಂಬಿದ ಅಖಿಲ ಭಾರತ ಕಿಸಾನ್ ಸಭೆಯ 25 ನೆಯ ಸ್ವರ್ಣ ಮಹೋತ್ಸವದ ಸಮ್ಮೇಳನ ಪಾಟ್ನಾ ನಗರದಲ್ಲಿ ಅತಿ ಉತ್ಸಾಹದಿಂದ ತುಂಬಿದ ಪ್ರತಿನಿಧಿಗಳ ಮಧ್ಯೆ ಮೇ 17 ರಂದು ಪ್ರಾರಂಭವಾಯಿತು.

ಇಡೀ ತನ್ನ ಜೀವನವನ್ನೇ ರೈತರ ಹೋರಾಟದ ಸಲುವಾಗಿಯೇ ಮೀಸಲಾಗಿಟ್ಟು ಆಸುನೀಗಿದ ಸ್ವಾಮಿ ಸಹಜಾನಂದ ಸರಸ್ವತಿಯವರ ಹೆಸರಲ್ಲಿ ರಚಿಸಲ್ಪಟ್ಟ ಸಭಾಮಂಟಪದಲ್ಲಿ ಸ್ವರ್ಣ ಸಮ್ಮೇಳನ ನಡೆಯಿತು. ಕ್ರಾಂತಿಕಾರಿ ಪರಂಪರೆಯ, ತ್ಯಾಗ—ಬಲಿದಾನದ ಹೆಮ್ಮರವಾಗಿರುವ ಭೂ ಕ್ರಾಂತಿಯ ಮುಂಚೂಣಿಯಲ್ಲಿರುವ ಅಖಿಲಭಾರತ ಕಿಸಾನ್ ಸಭೆಯ 80 ಲಕ್ಷ ಸದಸ್ಯರನ್ನು ಪ್ರತಿನಿಧಿಕರಿಸುವ ದೇಶದ ಪ್ರತಿಯೊಂದು ಮೂಲೆಯಿಂದ 900 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. 1936ರಲ್ಲಿ ಅಖಿಲ ಭಾರತ ಕಿಸಾನ್ ಸಭೆಯನ್ನು ಸ್ಥಾಪಿಸಿ ಅದರಲ್ಲಿ ಈಗಲೂ ಹೋರಾಡುತ್ತಾ ಬರುತ್ತಿರುವ ಹಲವಾರು ಹಿರಿಯ ಮುಖಂಡರೂ ಪ್ರತಿನಿಧಿಗಳಾಗಿ ಬಂದಿದ್ದರು.

ಮಹಾರಾಷ್ಟ್ರದ ಠಾಣೆಯಲ್ಲಿ ಆದಿವಾಸಿಗಳ ಮಧ್ಯೆ ನಿರಂತರ ದುಡಿಮೆಯಿಂದ "ವಾರ್ಲಿರಾಣಿ" ಎಂದು ಜಗತ್ ಪ್ರಸಿದ್ಧಿ ಪಡೆದ ಗೋಧಾವರಿ ಪರುಳೇಕರ ಅವರನ್ನು ಮುಂದಿನ ವರ್ಷಗಳಿಗಾಗಿ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಗೋದಾವರಿ ಪರುಳೇಕರ ಅವರು ತಮ್ಮ ಸ್ಫೂರ್ತಿದಾಯಕ ಭಾಷಣದಲ್ಲಿ ಕಿಸಾನ್ ಸಭೆಯ ಸಂಸ್ಥಾಪಕರಾದ ಸ್ವಾಮಿ ಸಹಜಾನಂದ ಸರಸ್ವತಿ, ಮುಜಾಫರ್ ಅಹಮ್ಮದ್, ಇಂದೂಲಾಲ್ ಯಾಜ್ಞಿಕ್, ಕಾರ್ಯಾನಂದ ಶರ್ಮಾ, ರಾಹುಲ್ ಸಂಕೃತ್ಯಾಯನ್, ಹರಿಕೃಷ್ಣ ಕೋನಾರ, ಬಂಕಿಂಮುಖರ್ಜಿ ಎ.ಕೆ.ಗೋಪಾಲನ್, ಪಿ. ಸುಂದರಯ್ಯ ಸೋಹನಸಿಂಗ ಬಖಾನಾ ಮೊದಲಾದವರು ಕಿಸಾನ್ ಸಭೆಯ ಸಂಘಟನೆ ಮತ್ತು ಬೆಳವಣಿಗೆಗಾಗಿ ಮಾಡಿದ ಅಪಾರ ಸೇವೆಯನ್ನು ನೆನಪಿಸಿಕೊಂಡರು. ನಮ್ಮ ದೇಶದ ರೈತ ವರ್ಗ ಅದರಲ್ಲೂ ಮುಖ್ಯವಾಗಿ ಅಖಿಲ ಭಾರತ ಕಿಸಾನ್ ಸಭೆಯ ಕಾರ್ಯಕರ್ತರು ಈ ಮಹಾನೀಯರು ಸಂಘಟನೆಯ ಅಭಿವೃದ್ಧಿಗಾಗಿ ಮಾಡಿದ ಅಪಾರ ಸೇವೆ, ತ್ಯಾಗ, ಬಲಿದಾನ ಹಾಗೆಯೇ ಅವರ ನಿಷ್ಠೆಯಿಂದ ಪಡೆದ ಸ್ಫೂರ್ತಿಯನ್ನು ಎಂದಿಗೂ ಮರೆಯಲಾರರೆಂದೂ ಹೇಳಿದರು. ಸ್ವರ್ಣ ಮಹೋತ್ಸವದ ಈ ವರ್ಷದಲ್ಲಿ ಅವರೆಲ್ಲರ ಸಂದೇಶವನ್ನು ದೇಶದ ಮೂಲೆ ಮೂಲೆಗೂ ಪ್ರಸಾರ ಮಾಡುವ ಪ್ರತಿಜ್ಞೆ ಕೈಗೊಳ್ಳೋಣವೆಂದು ಸಾರಿದರು.

ಇಪ್ಪತ್ತರ ಶತಕದ ಪ್ರಾರಂಭದಿಂದಲೂ ರೈತ ಚಳುವಳಿಯ ಕೇಂದ್ರವಾಗಿದ್ದು, ಭೂಮಾಲಕರ ಶೋಷಣೆ ಮತ್ತು ದಬ್ಬಾಳಿಕೆಯ ವಿರುದ್ಧ ರೈತರ ಹಕ್ಕನ್ನು ರಕ್ಷಿಸಲು ಕಿಸಾನ್ ಸಭೆಯನ್ನು ಸಂಘಟಿಸಲಿಕ್ಕೆ ಕಾರಣೀಭೂತವಾದ ಬಿಹಾರಿನ ರಾಜಧಾನಿ ಪಾಟ್ನಾದಲ್ಲಿ ಈ ಸ್ವರ್ಣ ಮಹೋತ್ಸವದ ಸಮ್ಮೇಳನ ನಡೆಯುತ್ತಿರುವುದು. ಶ್ಲಾಘನೀಯ ಸಭಾಂಗಣವನ್ನು ಸ್ವಾಮಿ ಸಹಜಾನಂದ ನಗರವೆಂದು ನಾಮಕರಣ ಮಾಡಿರುವುದು. ಅಖಿಲ ಭಾರತ ಕಿಸಾನ್ ಸಭೆಗಾಗಿ, ರೈತ ಚಳುವಳಿಗಾಗಿ ತನ್ನ ಇಡೀ ಜೀವನವನ್ನೇ ಮುಡುಪಾಗಿಟ್ಟಿರುವ ಒಬ್ಬ ತ್ಯಾಗಿಯ ಸ್ಮರಣೆಗೆ ಸಾರ್ಥಕವಾಗಿದೆ. ರೈತರನ್ನು ಸುಲಿಗೆಯಿಂದ ಮುಕ್ತಗೊಳಿಸುವ ಸಲುವಾಗಿ ದುಡಿಯುವವರೆಲ್ಲ ಇವರನ್ನು ಎಂದೂ ಮರೆಯಲಾರರು ಎಂದರು.

ನಮ್ಮ ದೇಶ ಇಂದು ಅತಿ ಭೀಕರವಾದ ಒಕ್ಕಲುತನದ ಬಿಕ್ಕಟ್ಟನ್ನೆದುರಿಸುತ್ತಿದೆಂದೂ, ಆ ಕಾರಣದಿಂದಾಗಿ ಈಗ 4 ಕೋಟಿಗೂ ಹೆಚ್ಚು ನಿರುದ್ಯೋಗಿಗಳು ಗ್ರಾಮಾಂತರ ಪ್ರದೇಶದಲ್ಲಿದ್ದಾರೆಂದು ಹೇಳಿದರು. ಭೂಮಿ ಕಳೆಕೊಂಡ ರೈತರು, ಕೃಷಿ ಕಾರ್ಮಿಕರು, ಹಳ್ಳಿಗಾಡಿದ ಕಂಬಾರ—ಕುಂಬಾರ ಮೊದಲಾದವರೆಲ್ಲ ನಿರುದ್ಯೋಗಿಗಳ ಸಾಲಿಗೆ ಸೇರುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಪರಿಹಾರದ ಸರ್ಕಾರಿ ಯೋಜನೆಗಳು ಈ ಸಮಸ್ಯೆಯ ಅಂಚನ್ನೂ ತಲ್ಪಿಲ್ಲ. ನಮ್ಮ ರೈತ ಸಮುದಾಯ ಅತಿ ಭಾರವಾದ ಸಾಲದ ಹೊರೆ ಹೊರುತ್ತಿದೆ.

(ಕೊನೆಯ ಪುಟಕ್ಕೆ)

### ಸಿ. ಪಿ. ಐ. (ಎಂ) ರಾಜ್ಯ ಸಮಿತಿಯ ಕರೆ

## ಗಡಿ ಪ್ರದೇಶದಲ್ಲಿ ಶಾಂತಿ ಕಬಳಿಸಬೇಡಿ

ಸಿ. ಪಿ. ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯ ಸಭೆ ಮೇ 25-26ರಂದು ಬೆಂಗಳೂರಿನಲ್ಲಿ ಕೆ. ಆರ್. ಶ್ರೀಯಾನ್ ಅವರ ಅಧ್ಯಕ್ಷತೆಯಲ್ಲಿ ಸೇರಿ ದೇಶದ ಹಲವಾರು ಪ್ರದೇಶಗಳಲ್ಲಿ ಛಿದ್ರಕಾರಿ ಭಯೋತ್ಪಾದಕ ಶಕ್ತಿಗಳು, ವಿದೇಶೀಯರ ಪ್ರಚೋದನೆಯಿಂದ ಕಾಯದೆ ಕಾನೂನು ಭಂಗಗೊಳಿಸಿ ದೇಶದ ಸ್ವಾತಂತ್ರ್ಯ ಐಕ್ಯತೆಗೆ ಗಂಡಾಂತರ ಉಂಟುಮಾಡುತ್ತಿರುವಾಗ, ಮಹಾರಾಷ್ಟ್ರ ಏಕೀಕರಣ ಸಮಿತಿ, ಶಿವಸೇನೆಯಂಥ ಪಡು ಬೆಳಗಾವಿ, ನಿಪ್ಪಾಣಿ, ಸಂಕೇಶ್ವರಗಳಲ್ಲಿ ಗಡಿ ಸಮಸ್ಯೆಯನ್ನೆತ್ತಿ ಗೊಂದಲ ಉಂಟು ಮಾಡುವುದಾಗಲೀ, ಜನತಾ ಪಕ್ಷ, ಕಾಂಗ್ರೆಸ್ (ಎಸ್) ಪಕ್ಷಗಳು ಶಾಲೆಗಳಲ್ಲಿ ಕಲಿಸುವ ಮಾಧ್ಯಮದ ಕುರಿತು ಸತ್ಯಾಗ್ರಹ ನಡೆಸುವುದಾಗಲೀ ಖಂಡನೀಯವೆಂದು ಹೇಳಿದೆ. ಮಹಾರಾಷ್ಟ್ರ - ಕರ್ನಾಟಕಗಳಷ್ಟೇ ಗಡಿ ಸಮಸ್ಯೆಯನ್ನೆದುರಿಸುತ್ತಿಲ್ಲ. ಕರ್ನಾಟಕ-ಕೇರಳ, ಆಂಧ್ರ - ಓರಿಸ್ಸಾ, ಪಂಜಾಬ-ಹರ್ಯಾಣ ಹೀಗೆ ಹಲವಾರು ರಾಜ್ಯಗಳಲ್ಲಿ ಈ ಸಮಸ್ಯೆ ಬಗೆಹರಿಯದೆ ಉಳಿದಿದೆ. ರಾಜ್ಯಮಟ್ಟ ಕೇಂದ್ರ ಮಟ್ಟದಲ್ಲಿ ಚರ್ಚಿಸಿ ಆ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಲ್ಲದೆ ಜಾತೀಯವಾದಿಗಳು, ಭಯೋತ್ಪಾದಕರು, ಛಿದ್ರಕಾರಿ ಶಕ್ತಿಗಳು ದೇಶದ ಸಾರ್ವಭೌಮತ್ವಕ್ಕೆ ಅಪಾಯಉಂಟು ಮಾಡುತ್ತಿರುವಾಗ, ಇತರ ಪ್ರದೇಶಗಳಂತೆಯೇ ಗಡಿಗಳಲ್ಲಿಯ ಜನತೆ ಬೆಲೆಯೇರಿಕೆ ನಿರುದ್ಯೋಗಗಳಂಥ ಸಮಸ್ಯೆಗಳಕುರಿತು ತಲೆಕೆಡಿಸಿಕೊಳ್ಳುತ್ತಿರುವಾಗ, ಗಡಿಸಮಸ್ಯೆ ಎತ್ತಿ ಗೊಂದಲಉಂಟು ಮಾಡುವುದೆಂದರೆ ಜನರ ದೃಷ್ಟಿಯನ್ನು ಬೇರೆಡೆಗೆ ಹರಿಸಿದಂತಾಗುತ್ತದೆ. ಜನತಾ ಮತ್ತು ಕಾಂಗ್ರೆಸ್ (ಎಸ್) ಪಕ್ಷಗಳು ಭಾಷೆಯ ಸಲುವಾಗಿಯೇ ಸತ್ಯಾಗ್ರಹ ಹೂಡುವುದರಿಂದ ಶಿವಸೇನೆ, ಮಹಾರಾಷ್ಟ್ರ ಏಕೀಕರಣ ಸಮಿತಿಯಂಥ ಸಂಕುಚಿತ ವಾದಿಗಳಿಗೆ, ಪ್ರತಿಗಾಮಿಗಳಿಗೆ ಅಶಾಂತಿ ಉಂಟು ಮಾಡಲು ಅವಕಾಶವಾಗಿ ಕೊಟ್ಟಂತಾಗುತ್ತದೆ. ಶಾಲೆಗಳಲ್ಲಿ ಕಲಿಸುವ ಭಾಷೆಯ ಕುರಿತಷ್ಟೆ ಸಮಸ್ಯೆಯಾಗಿದ್ದರೆ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಹೇಳಿದಂತೆ ಚರ್ಚೆ ಮೂಲಕ ಸೌಹಾರ್ದಯುತವಾಗಿ ಅದನ್ನು ಬಗೆಹರಿಸಬಹುದಾಗಿದೆ. ಕಾರಣ ಗಡಿ ಪ್ರದೇಶದಲ್ಲಿ ಕನ್ನಡ—ಮರಾಠಿ ಭಾಷಿಕರಲ್ಲಿ ಸೌಹಾರ್ದತೆಯನ್ನು ಕಾಪಾಡಿಕೊಳ್ಳುವ ರೀತಿಯಲ್ಲಿ ವರ್ತಿಸಬೇಕೆಂದು ಸಿ. ಪಿ. ಐ. (ಎಂ) ರಾಜಕೀಯ ಪಕ್ಷಗಳಿಗೂ, ಇತರ ಸಂಘ ಸಂಸ್ಥೆಗಳಿಗೂ ವಿನಂತಿ ಮಾಡಿಕೊಳ್ಳುತ್ತದೆ.

○

### ಪ್ಲಾಂಟೇಶನ್ ಕಾರ್ಮಿಕರ ಸಮಾವೇಶ

# ಜೂನ್ 16 - ಹೋರಾಟಕ್ಕೆ ಕರೆ

ಚಿಕ್ಕಮಗಳೂರಿನಲ್ಲಿ 1986 ಮೇ 17, 18 ರಂದು ಜರುಗಿದ ಪ್ಲಾಂಟೇಷನ್ ಕಾರ್ಮಿಕರ ಕರ್ನಾಟಕ ರಾಜ್ಯ ಸಮಾವೇಶವು ದಿನಗೂಲಿ, ಕಾಂಟ್ರಾಕ್ಟ್ ಹಂಗಾಮಿ ಮತ್ತು ಕ್ಯಾಜುಯಲ್ ಕಾರ್ಮಿಕರಿಗೆ ಪ್ಲಾಂಟೇಷನ್ ಲೇಬರ್ ಆಕ್ಟ್ ಮತ್ತು ಇತರ ಕಾರ್ಮಿಕ ಕಾಯಿದೆಗಳ ಪ್ರಕಾರ ಖಾಯಂ ಕೆಲಸಗಾರರಿಗೆ ಕೊಡುವ ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕು ಮತ್ತು ಅವರ ಸೇವೆಗಳನ್ನು ವಿಳಂಬ ಮಾಡದೆ ಕ್ರಮಬದ್ಧಗೊಳಿಸಬೇಕು ಎಂದು ಒತ್ತಾಯಪಡಿಸಲು ಜೂನ್ 16 ರಂದು ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳಲ್ಲಿ ಚಳುವಳಿ ನಡೆಸಬೇಕೆಂದು ಕರೆಕೊಟ್ಟಿದೆ.

ಸಂಬಳ ಸಹಿತ ವಾರದ ರಜೆ ಕೊಡಬೇಕು, ಪ್ಲಾಂಟೇಷನ್ ಲೇಬರ್ ಆಕ್ಟನ್ನು ಉಲ್ಲಂಘಿಸುವ ಪ್ಲಾಂಟರುಗಳಿಗೆ ಕಡ್ಡಾಯ ಜೈಲು ವಾಸವಾಗಬೇಕು. ತೋಟಕಾರ್ಮಿಕರಿಗೆ ವರ್ಷಕ್ಕೆ ಮೂರು ಜೊತೆ ಸಮವಸ್ತ್ರ, ಫೀಲ್ಡ್ ಷೂ, ಮತ್ತು ಒಂದು ಜತೆ ಚಪ್ಪಲಿ ಕೊಡಬೇಕು, ಐವರು ಮಹಿಳಾ ಕಾರ್ಮಿಕರಿರುವ (ಹೊರಗಿನಿಂದ ಕೆಲಸಕ್ಕೆ ಬರುವವರೂ ಸೇರಿ) ತೋಟಗಳಲ್ಲಿ ಮಕ್ಕಳನ್ನು ನೋಡಿಕೊಳ್ಳಲು ವ್ಯವಸ್ಥೆ ಇರಬೇಕು, ತೋಟ ಕಾರ್ಮಿಕರ ಮಕ್ಕಳಿಗೆ ಎಲ್ಲಾಹಂತಗಳಲ್ಲೂ ಉಚಿತ ಶಿಕ್ಷಣ ಕೊಡಬೇಕು ಮೊದಲಾದ 13 ಅಂಶಗಳನ್ನು ಸೇರಿಸಿ 1951 ರ ಪ್ಲಾಂಟೇಷನ್ಸ್ ಲೇಬರ್ ಆಕ್ಟನ್ನು ಅಮೂಲಾಗ್ರವಾಗಿ ತಿದ್ದುಪಡಿ ಮಾಡಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಪಡಿಸಲು ಸೆಪ್ಟಂಬರ್ ಮೊದಲ ವಾರದಲ್ಲಿ ಚಳುವಳಿನಡೆಸಬೇಕೆಂದು ಕರೆಕೊಟ್ಟಿದೆ.

ಪ್ಲಾಂಟೇಷನ್ ಲೇಬರ್ (ಅಮೆಂಡ್‌ಮೆಂಟ್) ಆಕ್ಟ್ 1981 ಈ ಕಾಯಿದೆಗೆ 5 ವರ್ಷಗಳಾದರೂ ನಿಯಮಗಳನ್ನು ರಚಿಸದಿರುವುದನ್ನು ಖಂಡಿಸಿದ ಸಮಾವೇಶವು ನಿಯಮಗಳನ್ನು (ರೂಲ್ಸನ್ನು) ರಚಿಸಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಪಡಿಸಲು ಎರಡು ವಾರಗಳ ಚಳುವಳಿಯನ್ನು ನಡೆಸಲು ಕರೆ ಕೊಟ್ಟಿದೆ.

ತೋಟ ಕಾರ್ಮಿಕರಿಗೆ ಈಗ ಸಿಗುತ್ತಿರುವ ಪಾಯಿಂಟಿಗೆ ಎರಡು ಪೈಸೆ ತುಟ್ಟಿ ಭತ್ತೆಯು ಬೆಲೆ ಏರಿಕೆಯಿಂದ ಆಗುತ್ತಿರುವ ಕೊಳ್ಳುವಶಕ್ತಿಯ ನಷ್ಟವನ್ನು ತುಂಬಿ ಕೊಡುತ್ತಿಲ್ಲ. ಆದ್ದರಿಂದ ಪಾಯಿಂಟಿಗೆ 5 ಪೈಸೆ ತುಟ್ಟಿ ಭತ್ಯೆಯನ್ನು ಕೊಡಬೇಕೆಂದೂ, ರಾಜ್ಯ ಸರ್ಕಾರವು ಕನಿಷ್ಟ ಕೂಲಿಯನ್ನು ಪುನರ್ವಿಮರ್ಶೆ ಮಾಡಬೇಕೆಂದೂ ಸಮಾವೇಶವು ಸರ್ಕಾರವನ್ನು ಆಗ್ರಹಪಡಿಸಿದೆ.

ಕಳೆದ ವರ್ಷ (1986 ಏಪ್ರಿಲ್ ವರೆಗೆ) ತೋಟದಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಕಾರ್ಮಿಕರನ್ನು ಪುನರ್ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿ ಕೊಡಗಿನ ಜೇನುಕೊಲ್ಲಿ ಎಸ್ಟೇಟ್ ಕಾರ್ಮಿಕರು ನಡೆಸುತ್ತಿರುವ ಮುಷ್ಕರವನ್ನು, ಒಪ್ಪಂದದ ಕೂಲಿ ಮತ್ತು ಇತರ ಸೌಲಭ್ಯಗಳನ್ನು ಕೊಡಬೇಕೆಂದು ಒತ್ತಾಯಿಸಿ ಹಾಸನ ಜಿಲ್ಲೆಯ ಮುರುಗ ಎಸ್ಟೇಟ್ ಕಾರ್ಮಿಕರು ನಡೆಸುತ್ತಿರುವ ಮುಷ್ಕರವನ್ನು ಬೆಂಬಲಿಸಿ ತೋಟ ಕಾರ್ಮಿಕರ ಮುಷ್ಕರವನ್ನು ಮುರಿಯಲು ಪೋಲೀಸರು ಮಧ್ಯ ಪ್ರವೇಶಿಸುವುದನ್ನು ಖಂಡಿಸುವ ನಿರ್ಣಯಗಳನ್ನು ಸಮಾವೇಶವು ಅಂಗೀಕರಿಸಿತು.

ಬೇಡಿಕೆಗಳಿಗಾಗಿ ನಡೆಯುವ ಚಳುವಳಿಯನ್ನು ಸಮನ್ವಯಗೊಳಿಸಿ ಮಾರ್ಗದರ್ಶನ ಮಾಡಲು ಸಮಾವೇಶವು ಒಂದು ಸಮನ್ವಯಸಮಿತಿಯನ್ನು ರಚಿಸಿದೆ. ಈ ಸಮನ್ವಯ ಸಮಿತಿಯಲ್ಲಿ ಸಿ.ಐ.ಟಿ.ಯು. ರಾಜ್ಯ ಕೇಂದ್ರದಿಂದ ಸಿ. ನಂಜುಂಡಪ್ಪ, ಚಿಕ್ಕಮಗಳೂರು ಜಿಲ್ಲೆಯಿಂದ ಎ. ಸಿ. ಕೇಶವ, ಎ. ವೇಲಾಯುಧ, ಅಣ್ಣಿ, ಎ. ಕೆ. ವಿಶ್ವನಾಥ್, ಹಾಸನ ಜಿಲ್ಲೆಯಿಂದ ವಿ. ಸುಕುಮಾರ್, ಕೃಷ್ಣ ಮೇಸ್ತ್ರಿ, ದೂಜ ಕೊಡಗು ಜಿಲ್ಲೆಯಿಂದ ಡಾ. ಐ ಆರ್. ಅಪ್ಪಣ್ಣ, ಪಿ. ವೀರಸ್ವಾಮಿ, ಕರ್ಪಸಾಮಿ, ಎಂ.ಎ. ಇಬ್ರಾಹಿಂ ರವರಿದ್ದು ಸಿ. ನಂಜುಂಡಪ್ಪನವರು ಈ ಸಮನ್ವಯ ಸಮಿತಿಯ ಸಂಚಾಲಕರಾಗಿರುತ್ತಾರೆ.

ವಿ. ಸುಕುಮಾರ್, ಎ. ಕೆ. ವಿಶ್ವನಾಥ ಮತ್ತು ವೀರಸ್ವಾಮಿಯವರ ಅಧ್ಯಕ್ಷೀಯ ಮಂಡಳಿಯ ಮಾರ್ಗದರ್ಶನದಲ್ಲಿ ಪ್ಲಾಂಟೇಷನ್ ಕಾರ್ಮಿಕರ ರಾಜ್ಯಮಟ್ಟದ ಸಮಾವೇಶ ಮೇ 17–18 ರಂದು ಚಿಕ್ಕಮಗಳೂರಿನಲ್ಲಿ ನೆರವೇರಿತು. ವಿಮಲಾ ರಣದಿವೆಯವರು ಉದ್ಘಾಟನೆ ಮಾಡಿದರು. ತ್ರಿಪುರ ವಿಧಾನ ಸಭೆಯ ಉಪಸಭಾಪತಿ ಬಿಮಲ್‌ಸಿಂಗ ಅವರೂ ಭಾಷಣ ಮಾಡಿದರು. (ಇವರಿಬ್ಬರ ಭಾಷಣಗಳನ್ನು ಹೋದ ವಾರ ಪ್ರಕಟಿಸಲಾಗಿದೆ.) ಸಿ. ನಂಜುಂಡಪ್ಪನವರು ಬರೆದ ಪ್ಲಾಂಟೇಶನ್ ಕಾರ್ಮಿಕರ ಚಳುವಳಿಯ ಮೂವತ್ತು ವರ್ಷಗಳು ಎಂಬ ಪುಸ್ತಕವನ್ನು ಎನ್. ಕೆ. ಉಪಾಧ್ಯಾಯರು ಬಿಡುಗಡೆ ಮಾಡುತ್ತಾ 40 ವರ್ಷಗಳ ಹಿಂದಿನ ಪ್ಲಾಂಟೇಶನ್ ಕಾರ್ಮಿಕರ ದಾರುಣ ಪರಿಸ್ಥಿತಿಯನ್ನು ವಿವರಿಸುತ್ತ 30 ವರ್ಷಗಳ ಪ್ಲಾಂಟೇಶನ್ ಕಾರ್ಮಿಕರ ಹೋರಾಟದ ಚರಿತ್ರೆಯನ್ನು ಜನರ ಮುಂದಿಟ್ಟು ಮುಂದಿನ ಹೋರಾಟಕ್ಕೆ ಸ್ಫೂರ್ತಿ ನೀಡಿದ್ದಕ್ಕಾಗಿ ಸಂಗಾತಿ ನಂಜುಂಡಪ್ಪನವರನ್ನು ಅಭಿನಂದಿಸಿದರು. ನಂಜುಂಡಪ್ಪನವರು ಮಂಡಿಸಿದ ವರದಿ ಮೇಲೆ 17 ಪ್ರತಿನಿಧಿಗಳು ಮಾತಾಡಿದರು. ವಿ. ಸುಕುಮಾರ ಅಖಿಲಭಾರತ ಪ್ಲಾಂಟೇಶನ್ ಕಾರ್ಮಿಕರ ಸಮ್ಮೇಳನದ ವರದಿ ನೀಡಿದರು. ಕೆ.ಸುಕುಮಾರ್ ಅಭಾರಮನ್ನಿಸಿದರು. ಹಲವಾರು ಮಹಿಳೆಯರನ್ನೊಳಗೊಂಡು 150ಕ್ಕಿಂತಲೂ ಹೆಚ್ಚು ಪ್ರತಿನಿಧಿಗಳು ಬಂದಿದ್ದರು.

## ಐದು ಲಕ್ಷ ರೂ. ನಿಧಿ ಸಂಗ್ರಹಿಸಲು ಕೇಂದ್ರ ಸಮಿತಿಯ ಕರೆ

1985 ಡಿಸೆಂಬರಿನಲ್ಲಿ ಸೇರಿದ್ದ ಸಿ.ಪಿ ಐ(ಎ) ಪಕ್ಷದ 12ನೇ ಸಮ್ಮೇಳನ ಸರ್ವಾಧಿಕಾರದ ವಿರುದ್ಧ ಪ್ರತಿಭಟನೆ, ಎಡ ಮತ್ತು ಪ್ರಜಾಪ್ರಭುತ್ವ ಐಕ್ಯತೆಯ ಸಾಧನೆ, ಪಕ್ಷದ ಸ್ವತಂತ್ರ ಚಟುವಟಿಕೆಗಳನ್ನು ಹೆಚ್ಚಿಸುವ ನಿರ್ಧಾರ ಮಾಡಿದೆ.

ದೇಶದಲ್ಲಿ ನಮ್ಮ ಪಕ್ಷ ಅತಿದೊಡ್ಡ ಎಡ ಶಕ್ತಿಯಾಗಿದ್ದು, ಜನರ ದೈನಂದಿನ ಹೋರಾಟಗಳನ್ನು ನಡೆಸಿ ಕಾರ್ಮಿಕರ ಐಕ್ಯತೆ ಸಾಧಿಸಲು ಹಲವಾರು ಚಲುವಟಿಕೆಗಳಲ್ಲಿ ಮಗ್ನವಾಗಿದೆ. ಜಗತ್ತನ್ನು ಅಣುಯುದ್ಧದಲ್ಲಿ ತೊಡಗಿಸಲು ಅಮೇರಿಕನ್ ಸಾಮ್ರಾಜ್ಯಶಾಹಿ ನಡೆಸುತ್ತಿರುವ ಪ್ರಯತ್ನವನ್ನು ವಿಫಲಗೊಳಿಸಲು ಜಗತ್ತಿನಲ್ಲಿ ಶಾಂತಿ ನೆಲೆಸಲು ಜನಾಭಿಪ್ರಾಯ ಮೂಡಿಸಲಿಕ್ಕೆ ನಮ್ಮ ಪಕ್ಷ ಕೆಲಸ ಮಾಡಬೇಕಾಗಿದೆ. ದೇಶದ ಐಕ್ಯತೆಯನ್ನು ನಾಶಮಾಡಲು ಹೊರಟಿರುವ ಪ್ರತ್ಯೇಕತಾವಾದಿ ಛಿದ್ರಕಾರಿ ಶಕ್ತಿಗಳ ವಿರುದ್ಧ ನಿರ್ಧರಿತ ಸತತ ಹೋರಾಟವನ್ನು ಮುಂದುವರಿಸಬೇಕಾಗಿದೆ. ಎಲ್ಲ ಎಡ ಹಾಗೂ ಜಾತ್ಯಾತೀತ ಶಕ್ತಿಗಳೊಡನೆ ಸೇರಿಕೊಂಡು ರಾಜೀವ ಗಾಂಧಿ ಸರಕಾರದ ಅಪಾಯಕಾರಿ ಆರ್ಥಿಕ ನೀತಿಯನ್ನು ಬದಲಾಯಿಸಲು ಮತ್ತು ಜನಜೀವನದ ಮೇಲೆ ಅದರ ಆಕ್ರಮಣದ ವಿರುದ್ಧ ಗಂಭೀರವಾದ ಯುದ್ಧವನ್ನು ಮುಂದುವರಿಸಬೇಕಾಗಿದೆ. ಬೆಲೆಯೇರಿಕೆಯ ವಿರುದ್ಧ ಹಾಗೆಯೇ ಮುಸ್ಲಿಂ ಮಹಿಳೆಯರ ಮಸೂದೆಯ ಮೂಲಕ ಮುಸ್ಲಿಂ ಪಂಥವಾದಿಗಳಿಗೆ ಶರಣಾಗತಿಯಾಗುವ ರಾಜೀವ ಗಾಂಧಿ ಸರಕಾರದ ನಿರ್ಣಯದ ವಿರುದ್ಧ ದೇಶಾದ್ಯಂತ ಪ್ರತಿಭಟನೆ (ಆಳುವಪಕ್ಷಗದೊಳಗೆ ಕೂಡ) ಬೆಳೆದು ಬರುತ್ತಿದೆ. ನಮ್ಮ ಪಕ್ಷ ಈ ಎರಡು ವಿಷಯಗಳಲ್ಲಿಯೂ ಪ್ರತಿರೋಧವನ್ನು ತೀವ್ರಗೊಳಿಸಬೇಕು. ಇವುಗಳಿಗಾಗಿ ನಮ್ಮ ಪಕ್ಷ ರಾಜಕೀಯ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸಬೇಕಾಗಿದೆ. ರಾಷ್ಟ್ರೀಯ ಐಕ್ಯತೆಗಾಗಿ ಪಂಜಾಬ್, ಅಸ್ಸಾಂ, ತ್ರಿಪುರ ಜಮ್ಮು–ಕಾಶ್ಮೀರಗಳಲ್ಲಿ ನಮ್ಮ ಪಕ್ಷ ಧೈರ್ಯದಿಂದ, ತತ್ವನಿಷ್ಠೆಯಿಂದ ಹೋರಾಟ ನಡೆಸಿದೆ. ಆ ಪ್ರದೇಶಗಳಲ್ಲಿ ನಮ್ಮ ಪಕ್ಷದ ಕಾರ್ಯಕರ್ತರ ಮತ್ತು ಸಹಾನುಭೂತಿದಾರರ ಮೇಲೆ ದಿನಾಲೂ ಅತ್ಯಾಚಾರ ನಡೆದಿದೆ, ಕೊಲೆಯಾಗುತ್ತಿದೆ.

ಆಳುವ ಪಕ್ಷಗಳ ಸಿದ್ಧಾಂತಗಳನ್ನೆದುರಿಸಲು ಪಕ್ಷದೊಳಗೆ ಸೈದ್ಧಾಂತಿಕ ಮತ್ತು ಪ್ರಚಾರದ ಕೆಲಸವನ್ನು ತೀವ್ರಗೊಳಿಸಬೇಕೆಂದು ಪಕ್ಷದ ಸಮ್ಮೇಳನ ಆದೇಶ ನೀಡಿದೆ. ಅದಕ್ಕಾಗಿ ಪಕ್ಷದ ಕೇಂದ್ರದಿಂದ ಹೆಚ್ಚು ಸಾಹಿತ್ಯ ಪ್ರಕಟವಾಗಬೇಕು, ಕಾರ್ಯಕರ್ತರಿಗೆ ಶಿಕ್ಷಣದ ವ್ಯವಸ್ಥೆ ಮಾಡಬೇಕು.

ಈ ಜವಾಬ್ದಾರಿಗಳನ್ನೆಲ್ಲ ಪೂರೈಸಲು ಪಕ್ಷಕ್ಕೆ ಹೆಚ್ಚಿನ ಸಂಪನ್ಮೂಲಗಳ ಆಗತ್ಯವಿದೆ. ಪಕ್ಷದ ಘಟಕಗಳು ಜನರ ಮಧ್ಯೆ ಹೋಗಿ, ಪಾರ್ಟಿಯ ರಾಜಕೀಯವನ್ನು ಜನರಿಗೆ ತಿಳಿಸಿ ಹೇಳಿ ಪಕ್ಷದ ನಿಧಿ ಕೂಡಿಸಬೇಕು.

ಕೇಂದ್ರ ಸಮಿತಿ ರೂ 5 ಲಕ್ಷ ನಿಧಿ ಸೇರಿಸಲು ಕರೆ ಕೊಟ್ಟಿದೆ. ಪಕ್ಷದ ಎಲ್ಲಾ ಸಹಾನುಭೂತಿದಾರರೂ, ಪಕ್ಷದ ಮತ್ತು ಎಡ ಚಳುವಳಿಯ ಬೆಂಬಲಿಗರೂ ಕೇಂದ್ರ ಸಮಿತಿಯ ಕರೆಗೆ ಓಗೊಟ್ಟು ನಿಧಿ ಸಂಗ್ರಹವನ್ನು ಯಶಸ್ವಿಗೊಳಿಸುತ್ತಾರೆಂದು ಆಶಿಸುತ್ತೇವೆ.

## ಬೀಡಿ ಕಾರ್ಮಿಕರಿಗೆ ವಾರದ ಪೂರ್ತಿ ಕೆಲಸಕ್ಕೆ ಆಗ್ರಹ

ಮಾಲಿಕರ ಲಾಭಕೋರ ನೀತಿ ಹಾಗೂ ಕೇಂದ್ರ ಸರಕಾರದ ತಪ್ಪು ತೆರಿಗೆ ನೀತಿಯಿಂದಾಗಿ ಬೀಡಿ ಕಾರ್ಮಿಕರಿಗೆ ಕೆಲಸ ಕಡಿತವಾಗಿದೆ.

ರಾಷ್ಟ್ರ ವ್ಯಾಪಿಯಾಗಿರುವ ಬೀಡಿ ಕೈಗಾರಿಕೆಯಲ್ಲಿ ಕೇಂದ್ರ ಸರಕಾರವು ನ್ಯಾಯವಾದ ರಾಷ್ಟ್ರೀಯ ಕನಿಷ್ಟ ಕೂಲಿ ನಿಗದಿ ಪಡಿಸದೆ ಕಾರ್ಮಿಕರನ್ನು ಮನ ಬಂದಂತೆ ಶೋಷಣೆ ಮಾಡಲು ಮಾಲಿಕರಿಗೆ ಅವಕಾಶ ಮಾಡಿಕೊಟ್ಟಿದೆ. ಈಗಾಗಲೇ ಬೀಡಿ ಕೈಗಾರಿಕೆಯಲ್ಲಿ ಕೆಲಸ ಕಡಿತ ಮಾಡಿರುವುದರಿಂದಾಗಿ ವಾರದಲ್ಲಿ 6 ದಿವಸ ಸಾಕಷ್ಟು ಕೆಲಸವಿಲ್ಲದಿರುವುದರಿಂದ ಕಾರ್ಮಿಕರು ಸಂಕಷ್ಟಕ್ಕೀಡಾಗಿದ್ದಾರೆ. ಕೆಲಸವಿಲ್ಲದ ದಿನಗಳಿಗೆ ಕಾನೂನು ರೀತ್ಯಾ ಪರಿಹಾರ ಕೊಡಬೇಕೆಂಬನಿಯಮವನ್ನು ಉಲ್ಲಂಘಿಸಿದ್ದಾರೆ. ಮಾಲಕರ ಈ ಅಕ್ರಮದ ವಿರುದ್ಧ ಬೀಡಿ ಕಾರ್ಮಿಕರನ್ನು ಹೋರಾಟಕ್ಕೆ ಸಿದ್ಧಗೊಳಿಸಬೇಕೆಂದು ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ತೀರ್ಮಾನಿಸಿದೆ.

ಭಾರತ್ ಬೀಡಿಯ ಉಳ್ಳಾಲ ಡಿಪೋದಲ್ಲಿ ಕಳೆದ 9 ವರ್ಷಗಳಿಂದ ಪ್ರಾವಿಡೆಂಟ್ ಫಂಡಿಗೆ ಕಡಿತವಾದ ಹಣದ ರಶೀದಿಯನ್ನು ಕೊಡದೇ ಇರುವುದನ್ನು ವಿರೋಧಿಸಿ ಹೋರಾಟಕ್ಕೆ ತಯಾರಿ ನಡೆಸಬೇಕೆಂದು ಸಂಘದ ಸಭೆಯು ನಿರ್ಣಯಿಸಿತು.

ಜಿಲ್ಲಾ ಸಿ.ಐ.ಟಿ.ಯು ಪ್ರಧಾನ ಕಾರ್ಯದರ್ಶಿ ಕಾ. ಕೆ. ಮೂಸಬ್ಬನವರು ಈ ಸಭೆಯಲ್ಲಿ ಉಪಸ್ಥಿತರಿದ್ದು ಸಲಹೆ ನೀಡಿದರು.

### ಮೈಸೂರು

# ನಿರುದ್ಯೋಗ ವಿರೋಧಿ ಸಮಾವೇಶ

ಮೈಸೂರು ಜಿಲ್ಲಾ ಸಿ.ಐ.ಟಿ.ಯು., ಬ್ಯಾಂಕ್ (ಬಿ.ಇ.ಎಫ್.ಐ), ಎಲ್.ಐ.ಸಿ. (ಎ.ಐ.ಇ.ಎ) ನೌಕರರ ಸಂಘಗಳ ಆಶ್ರಯದಲ್ಲಿ 18-5-1986 ರಂದು ನಿರುದ್ಯೋಗ ವಿರೋಧಿಸಿ, ಸಾರ್ವಜನಿಕ ಕ್ಷೇತ್ರ ಉಳಿಸಿ, ಕಂಪ್ಯೂಟರ್ ವಿರೋಧಿ ಸಮಾವೇಶ ನಡೆಸಲ್ಪಟ್ಟಿತು.

ವಿಮಾ ಕಾರ್ಪೊರೇಶನ್ ನೌಕರರ ಸಂಘದ ಮುಖಂಡರಾದ ಎ. ಎಸ್. ಆಚಾರ್ಯರವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ಕಾಂಗ್ರೆಸ್ ಸರಕಾರದ ನೀತಿಯಿಂದಾಗಿ ದೇಶದಲ್ಲಿ ಕೈಗಾರಿಕೆ ಅಭಿವೃದ್ಧಿ ಹಾಗೂ ಉದ್ಯೋಗಾವಕಾಶಗಳು ಕುಂಟಿತವಾಗುತ್ತಿರುವುದನ್ನು ವಿವರಿಸಿದರು. ಕೆನರಾ ಬ್ಯಾಂಕ್‌ನ ಸ್ಟಾಫ್ ಯೂನಿಯನ್ನಿನ ಉಪಾಧ್ಯಕ್ಷರಾದ ಎಸ್. ರೇವಣ್ಣನವರೂ ಈ ಸಂದರ್ಭದಲ್ಲಿ ಮಾತನಾಡಿದರು.

"ಕಂಪ್ಯೂಟರ್‌ವಿರೋಧಿಸಿ" ಬಗ್ಗೆ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ನಿನ ಸುರೇಶ್‌ರಾವ್, "ಸಾರ್ವಜನಿಕ ಕ್ಷೇತ್ರ ಉಳಿಸಿ" ಬಗ್ಗೆ ಇನ್ಸುರನ್ಸ್ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್ನಿನ ಕಾರ್ಯದರ್ಶಿಗಳಾದ ಅನಂತ ಸುಬ್ಬರಾಯ, "ನಿರುದ್ಯೋಗ ವಿರೋಧಿಸಿ" ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಆರ್. ಮೋಹನ್ ಕುಮಾರ್ ರವರು ನಿರ್ಣಯ ಮಂಡಿಸಿದರು. ನಿರ್ಣಯಗಳ ಮೇಲೆ ಚರ್ಚೆ ನಡೆದ ನಂತರ ಅವುಗಳನ್ನು ಅಂಗೀಕರಿಸಲಾಯಿತು. ಬಿ. ಆರ್. ಆದಿಶೇಷ್ ಸಿಂಡಿಕೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್, ರವರು ಅಧ್ಯಕ್ಷತೆ ವಹಿಸಿದ್ದರು. ಎಸ್. ವಿ. ರಮೇಶ್ ವಂದನೆ ಸಲ್ಲಿಸಿದರು.

## ಸಿ.ಡಿ.ಪಿ.ಬಿ. ಕಚೇರಿಯಲ್ಲಿ ಮೋಸ

ಕೋಲಾರ ಜಿಲ್ಲೆ ಬಂಗಾರಪೇಟೆಯ ಬಾಲವಿಕಾಸ ಯೋಜನಾ ಕೇಂದ್ರದಲ್ಲಿ ಆಹಾರ ಧಾನ್ಯಗಳ ಕೊಳ್ಳುವಿಕೆಮತ್ತು ಹಂಚುವಿಕೆಯಲ್ಲಿ ದುರುಪಯೋಗ ಹಾಗೂ ಅವ್ಯವಹಾರ ನಡೆಯುತ್ತಿದೆಂದೂ ಲಕ್ಷಾಂತರ ರೂಪಾಯಿಯ ಮೋಸ ನಡೆದಿದೆಂದೂ ಇದರ ಕುರಿತು ಮೇಲಧಿಕಾರಿಗಳು ಕೂಡಲೇ ಗಮನ ಹರಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸಾರ್ವಜನಿಕರು ಸರಕಾರಕ್ಕೆ ಒತ್ತಾಯಿಸಿದ್ದಾರೆ.

# ಭೂ-ಸುಧಾರಣೆಯಲ್ಲಿ ಕಾಂಗ್ರೆಸ್ ವಿಫಲತೆ

– ಜ್ಯೋತಿ ಬಸು

ಭೂ ಸುಧಾರಣೆಯನ್ನು ಜಾರಿ ಮಾಡುವುದರಲ್ಲಿ ಕಾಂಗ್ರೆಸ್ ಆಡಳಿತೆಯಲ್ಲಿರುವ ಸರಕಾರಗಳು ಸಂಪೂರ್ಣ ವಿಫಲಗೊಂಡಿವೆಯೆಂದೂ, ಅವುಗಳ ಕುರಿತು ಹಾಗೆಯೇ ಸಮತಾವಾದದ ಕುರಿತು ಬರೇ ಬೊಗಳೆ ಸಹಾನುಭೂತಿ ತೋರಿಸುವುದರಲ್ಲಿಯೇ ಅವರು ತೊಡಗಿದ್ದಾರೆಂದೂ ಪ.ಬಂಗಾಲದ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಪಾಟ್ನಾದಲ್ಲಿ ಅಖಿಲ ಭಾರತ ಕಿಸಾನ್ ಸಭೆಯ ಸ್ವರ್ಣಮಹೋತ್ಸವದಲ್ಲಿ ಭಾಷಣ ಮಾಡುತ್ತಾ ಹೇಳಿದರು. ಎಡರಂಗ ಸರಕಾರಗಳಿರುವ ಪ.ಬಂಗಾಲ,ತ್ರಿಪುರ, ಹಿಂದೆ ಕೇರಳಗಳಲ್ಲಿ ಸ್ವಲ್ಪವಾದರೂ ಭೂ ಸುಧಾರಣೆಯಾಗಿದೆಂದರು. ದಿಲ್ಲಿಯಲ್ಲಿಸೇರಿದ್ದ ಹೋದ ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲ್‌ಸಭೆಯಲ್ಲಿ ಪ.ಬಂಗಾಲ ತ್ರಿಪುರಾಗಳನ್ನು ಬಿಟ್ಟರೆ ಬೇರೆ ಯಾವ ರಾಜ್ಯದ ಮುಖ್ಯಮಂತ್ರಿ ಕೂಡ ಭೂ ಸುಧಾರಣೆ ಮತ್ತು ಸಮತಾವಾದದ ಕುರಿತು ಚಕಾರವೆತ್ತಲಿಲ್ಲವೆಂದರೂ ಇತ್ತೀಚೆಗೆ ಅರವಾಲ್‌ದಲ್ಲಿ ನಡೆದ ಪೋಲೀಸರ ಗೋಳಿಬಾರಿನ ಕುರಿತು ಗಮನ ಸೆಳೆಯುತ್ತಾ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಭೂಹೀನ ಕಾರ್ಮಿಕರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯಲ್ಲಿ ಅದು ಅತ್ಯಂತ ಅಮಾನುಷ ಕ್ರೂರವೆಂದು ವ್ಯಥೆಪಟ್ಟರು.

ಬಡತನ ಮತ್ತು ನಿರುದ್ಯೋಗದ ಕುರಿತು ಅಂಕೆಸಂಖ್ಯೆಗಳನ್ನು ಬೇಕಂತಲೆ ತಪ್ಪಾಗಿ ಪ್ರಕಟಿಸಲಾಗುತ್ತಿದೆಂದೂ, ಹಸಿರು ಕ್ರಾಂತಿಯ ಪ್ರಚಾರ ಹೆಚ್ಚದಂತೆ ಗ್ರಾಮಾಂತರ ಪ್ರದೇಶದಲ್ಲಿ ಜನರಿಗೆ ಲಭ್ಯವಾಗುವ ಆಹಾರ 1961 ರಷ್ಟಲ್ಲದೆ ಹೆಚ್ಚಾಗಿಲ್ಲೆಂದು ಆರೋಪಿಸಿದರು. ನಾರಿನ (ಜ್ಯೂಟ್) ಚೀಲಗಳ ಬದಲಾಗಿ ಸಿಂತೆಟಿಕ್ ಚೀಲಗಳನ್ನು ಪ್ರಯೋಗಿಸುವುದರಿಂದ ಲಕ್ಷಾವಧಿಜ್ಯೂಟ (ನಾರು) ಬೆಳೆಯುವವರನ್ನು ಬೀದಿ ಪಾಲು ಮಾಡಿದಂತಾಗುತ್ತದೆಂದು ಹೇಳಿದರು. ಕೇಂದ್ರ ಸರಕಾರದ ಅಂಥ ನೀತಿಗಳ ವಿರುದ್ಧ ಸಮಗ್ರಜನತೆಹಾಗೂ ರೈತ ವರ್ಗ ಬಲವಾದ ಚಳುವಳಿ ನಡೆಸಬೇಕೆಂದು ಕರೆ ನೀಡಿದರು.

## ಯುವಜನರ ಸಂಘಟನೆಗೆ ಕರೆ

ಭದ್ರಾವತಿಯ ಪುರಭವನದಲ್ಲಿ ದಿನಾಂಕ : 19–5–1986 ರಂದು ಡಿ ವೈ ಎಫ್ ಐ ಜಿಲ್ಲಾ ಸಮಾವೇಶ ನಡೆಸಲಾಯ್ತು. ಯುವಜನರು, ಹಿತೈಷಿಗಳು ಭಾರಿ ಸಂಖ್ಯೆಯಲ್ಲಿ ಭಾಗ ವಹಿಸಿದರು

ಈ ಸಭೆಗೆ ಮುಖ್ಯ ಅತಿಥಿಗಳಾಗಿ ತ್ರಿಪುರ ರಾಜ್ಯದ ಶಾಸನಸಭೆ ಉಪ ಸಭಾಪತಿಗಳಾದ ಕಾ|| ಭೀಮಲ್ ಸಿಂಗ್ ಅವರು ಆಗಮಿಸಿದ್ದು ದೇಶದ ರಾಜಕೀಯ ಪರಿಸ್ಥಿತಿ. ತ್ರಿಪುರಾದಲ್ಲಿ ಎಡರಂಗ ಸರಕಾರದ ಸಾಧನೆಗಳ ಕುರಿತು ಸ್ಫೂರ್ತಿದಾಯಕವಾಗಿ ಭಾಷಣ ಮಾಡಿದರು. (ವಿವರ ಹಿಂದಿನ ವಾರ ಪ್ರಕಟಿಸಲಾಗಿದೆ)

ಕಾಮ್ರೇಡ್ ಭೀಮಲ್ ಸಿಂಗ್ ರವರ ಭಾಷಣದ ಅನುವಾದವನ್ನು ಕಾಮ್ರೇಡ್ ಎನ್. ಕೆ. ಉಪಾಧ್ಯಾಯರು ಮಾಡಿದರು.

ಸಿ. ಐ. ಟಿ ಯು. ರಾಜ್ಯ ಕಾರ್ಯದರ್ಶಿಗಳಾದ ಕಾ|| ಸಿ. ನಂಜುಂಡಪ್ಪನವರು ಮಾತನಾಡಿ ಸಾರ್ವಜನಿಕ ವಲಯದ ಪ್ರಶ್ನೆ, ನಿರುದ್ಯೋಗ ಕಾರ್ಮಿಕರು ಅನುಭವಿಸುತ್ತಿರುವ ಸಂಕಷ್ಟವನ್ನು ವಿವರಿಸಿದರು.

ಡಿ. ವೈ. ಎಫ್. ಐ. ರಾಜ್ಯದ ಅಧ್ಯಕ್ಷರಾದ ಕಾಮ್ರೇಡ್ ಮಹಾಬಲ ವಡೆಯರ್ ಹೋಬಳಿಯವರು ಮಾತನಾಡಿ ಡಿ ವೈ ಎಫ್. ಐ ಸಂಘಟನೆ ಬಗ್ಗೆ ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ಕಾ|| ಎಸ್. ಬಿ. ಶಿವಶಂಕರ್ ವಹಿಸಿದ್ದರು. ಕಾ|| ಎಲ್. ರಂಗೇಗೌಡ, ಸ್ವಾಗತಿಸಿದರೆ ಕಾ|| ಮೇಲು ವಂದಿಸಿದರು.

## ಪ. ಬಂಗಾಲದಲ್ಲಿ ಭೂಸುಧಾರಣೆಯ ಸಾಧನೆ

ಪಶ್ಚಿಮ ಬಂಗಾಲದ ಎಡರಂಗ ಸರಕಾರ ಕಳೆದ 9 ವರ್ಷಗಳಲ್ಲಿ ಭೂ ಹೀನರಿಗೆ 16 ಲಕ್ಷ ಎಕ್ರೆ ಭೂಮಿ ಹಂಚಿದೆ ಎಂದು ಆಪರೇಶನ್ ಬರ್ಗಾ ಯೋಜನೇನ್ವಯ 13 ಲಕ್ಷ ಪಾಲಿಗಾಗಿ ದುಡಿಯುವ ರೈತರನ್ನು ಗುರುತಿಸಿ ನೊಂದಾಯಿಸಿಕೊಳ್ಳಲಾಗಿದೆಯೆಂದೂ, ಕೃಷಿ ಕೂಲಿಗಾರರ ವೇತನವನ್ನು ಇಮ್ಮಡಿಗೊಳಿಸಲಾಗಿದೆಯೆಂದು ಶೇ. 4 ರಷ್ಟು ಬಡ್ಡಿಯಿಂದ ರೈತರಿಗೆ ಹಲವಾರು ಯೋಜನೆಗಳ ಮೂಲಕ ಸಾಲ ವಿತರಣೆ ಮಾಡಲಾಗುತ್ತಿದೆಂದು, 2ಲಕ್ಷ ರೈತರಿಗೆ ಮನೆಕಟ್ಟಲು ಜಾಗ ಮಂಜೂರುಮಾಡಲಾಗಿದೆಂದು, ಈ ರೀತಿ ರೈತರಿಗೆ ಹಲವಾರು ಅನುಕೂಲತೆಗಳನ್ನು ಒದಗಿಸಿದೆಯೆಂದು ಪ. ಬಂಗಾಲದ ಭೂಸುಧಾರಣ ಮಂತ್ರಿಯವರಾದ ಬಿನಾಯ್ ಕೃಷ್ಣ ಚೌಧರಿಯವರು ಅಂಬರನಾಥ್ ದಲ್ಲಿನಡೆದಮಹಾರಾಷ್ಟ್ರದ 13 ನೆಯ ರಾಜ್ಯ ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡುತ್ತ ವಿವರಿಸಿದರು 13 ಜಿಲ್ಲೆಗಳಲ್ಲಿ 69,675 ಸದಸ್ಯತ್ವವನ್ನೊಳಗೊಂಡ ರಾಜ್ಯ ಸಮ್ಮೇಳನದ ಎರಡು ಸಾರ್ವಜನಿಕ ಸಭೆಗಳಲ್ಲಿ ಕಲ್ಯಾಣ ಮತ್ತು ಮುಂಬಯಿಯ20ಸಾವಿರಕ್ಕೂ ಮೇಲ್ಪಟ್ಟು ರೈತರು, ಕೃಷಿ ಕಾರ್ಮಿಕರೇ ನೆರೆದಿದ್ದರು. ಸಂಘಟಿತ ಕಾರ್ಮಿಕ ವರ್ಗ ಎರಡೂ ಕಡೆ ಅಷ್ಟು ಜನರಿಗೆ ಊಟದ ಪೊಟ್ಟಣ ಕೊಟ್ಟು ರೈತಕಾರ್ಮಿಕರ ಸಖ್ಯತೆಯನ್ನು ಪ್ರದರ್ಶಿಸಿದರು.

# ಕಾ|| ಎಂ. ಎಸ್. ಉಗ್ರಪ್ಪನವರಿಗೆ ಆತ್ಮೀಯ ಬೀಳ್ಕೊಡುಗೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೈಸೂರು ಜಿಲ್ಲಾ ಸಮಿತಿ ಕಾರ್ಯದರ್ಶಿಗಳೂ, ಸಿ ಐ ಟಿ ಯು ಜಿಲ್ಲಾ ಅಧ್ಯಕ್ಷರೂ ಆದ ಎಂ. ಎಸ್. ಉಗ್ರಪ್ಪರವರು ಜೂನ್ 1 ರಿಂದ 35 ದಿನಗಳ ಕಾಲ ಸೋವಿಯತ್ ಯುನಿಯನ್ನಿನಲ್ಲಿ ಪ್ರವಾಸ ಮಾಡಲಿದ್ದು ಈ ಸಂದರ್ಭದಲ್ಲಿ ಅವರನ್ನು ಬೀಳ್ಕೊಡುವ ಸಮಾರಂಭ ಮೈಸೂರಿನಲ್ಲಿ 24–5–86 ರಂದು ಏರ್ಪಡಿಸಲಾಗಿತ್ತು.

ಮೈಸೂರು ಜಿಲ್ಲಾ ಸಿ ಐ ಟಿ ಯು ಸಮಿತಿ ಏರ್ಪಡಿಸಿದ್ದ ಈ ಸಮಾರಂಭದಲ್ಲಿ ಉಗ್ರಪ್ಪನವರ ಅಪಾರ ಅಭಿಮಾನಿಗಳು, ಗೆಳೆಯರ ಬಳಗ, ಕಾರ್ಮಿಕರು ಭಾಗವಹಿಸಿ ಆತ್ಮೀಯವಾಗಿ ಮಾತನಾಡಿ ಉಗ್ರಪ್ಪನವರ ಸೋವಿಯತ್ ಯುನಿಯನ್ನಿನ ಪ್ರವಾಸದಿಂದಾಗಿ ಎಡ ಚಳುವಳಿ ಬೆಳವಣಿಗೆಗೆ, ಕಾರ್ಮಿಕ ವರ್ಗದ ಅಭ್ಯುದಯಕ್ಕೆ ಹೋರಾಡಲು ಅಪಾರ ನೆರವಾಗಲಿದೆ ಎಂದು ಆಶಯ ವ್ಯಕ್ತ ಪಡಿಸಿದರು. ಉಗ್ರಪ್ಪನವರ ಸರಳವಾದ ಹಾಗೂ ತತ್ವಬದ್ಧವಾದ ಬದುಕಿನ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು.

ಸೋವಿಯತ್ ಪ್ರವಾಸದ ಕಾಲದಲ್ಲಿ ಅಲ್ಲಿನ ಸಮಾಜದ ಬಗ್ಗೆ ತಿಳಿಯಲು ಎಲ್ಲಾ ಪ್ರಯತ್ನ ಮಾಡುವುದಾಗಿ ಉಗ್ರಪ್ಪನವರು ಸಭೆಗೆ ತಿಳಿಸಿದರು.

ಹಿರಿಯ ವಕೀಲರಾದ ಎಲ್. ಶ್ರೀಕಂಠಯ್ಯರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಅಧ್ಯಾಪಕರಾದ ಎಂ. ಎಸ್. ಶ್ರೀಕಂಠಯ್ಯ, ಶಾಸಕರಾದ ವೇದಾಂತ ಹೆಮ್ಮಿಗೆ, ಜನತಾ ಪಕ್ಷದ ಮುಖಂಡರಾದ ಎ. ರಾಮಣ್ಣ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವಿ. ಎಚ್. ಗೌಡ, ಎಸ್. ಎಫ್. ಐ. ಜಿಲ್ಲಾ ಅಧ್ಯಕ್ಷೆ ಎಸ್. ಆರ್. ಲೀಲಾವತಿ ಮೊದಲಾದವರು ಈ ಸಂದರ್ಭದಲ್ಲಿ ಮಾತನಾಡಿದರು. ಅಪಾರ ಗೆಳೆಯರು ಹೂ ಹಾರ ಅರ್ಪಿಸಿ ಅಭಿನಂದಿಸಿದರು. ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು, ವಿದ್ಯಾರ್ಥಿ – ಯುವಜನ ಸಂಘಟನೆಗಳ ನಾಯಕರುಗಳು ಶುಭ ಕೋರಿದರು.

ಮೊದಲಿಗೆ ಸಿ ಐ ಟಿ ಯು ಕಾರ್ಯದರ್ಶಿ ಆರ್. ಮೋಹನ್ ಕುಮಾರ್ ಸ್ವಾಗತಿಸಿದರು. ಎಸ್. ಎಫ್. ಐ. ರಾಜ್ಯ ಅಧ್ಯಕ್ಷರಾದ ಆರ್. ಜಯಕುಮಾರ್ ವಂದಿಸಿದರು.

# ಅಮೇರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಪ್ರತಿಭಟನೆ

ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಸಲುವಾಗಿ, ದಕ್ಷಿಣ ಕೊರಿಯದ ರಾಜಧಾನಿಯಾದ ಸಿಯೋಲಿನ ರಾಷ್ಟ್ರೀಯ ವಿಶ್ವವಿದ್ಯಾಲಯದ 23ವರ್ಷಪ್ರಾಯದ ವಿದ್ಯಾರ್ಥಿ ಚಿಮಿಣಿಎಣ್ಣೆ ಸುರುವಿಕೊಂಡು ಮಹಡಿಯಿಂದ ಜಿಗಿದು ಸತ್ತಾಗ ಅವನಿಗೆ ಸಹಾನುಭೂತಿ ತೋರಿಸಲು ನೆರೆದಾಗ ಪೋಲೀಸರ ಮಧ್ಯಪ್ರವೇಶದ ವಿರುದ್ಧ ಸಾವಿರಾರು ವಿದ್ಯಾರ್ಥಿಗಳು ಪೋಲೀಸರ ವಿರುದ್ಧ ಹೋರಾಡಿದರು.

1980 ರಲ್ಲಿ ದ. ಕೋರಿಯದ ಮಿಲಿಟರಿ ಆಡಳಿತೆಯ ವಿರುದ್ಧ ಕ್ವಾಂಗ್ಜುನಲ್ಲಿ ನಾಗರೀಕರು ದಂಗೆ ಎದ್ದಿದಾಗ,ಪೋಲೀಸರ ಗುಂಡಿಗಾಹುತಿಯಾದವರಿಗೆ ಶ್ರದ್ಧಾಂಜಲಿ ಅರ್ಪಿಸಲು ನೆರೆದ ವಿದ್ಯಾರ್ಥಿಗಳ ಮೇಲೆ 1000 ಪೋಲೀಸರು ಆಕ್ರಮಣ ಮಾಡಿ 68ವರ್ಷ ಪ್ರಾಯದ ರೆವರೆಂಡ್ ಮೂನ್‌ಇಕ್ ಹ್ವಾನ್ ಅವರನ್ನು ಬಂಧಿಸಲು ಪ್ರಯತ್ನ ನಡೆಸಿದಾಗ ವಿದ್ಯಾರ್ಥಿಗಳು ಪೆಟ್ರೋಲ್ ಬಾಂಬುಗಳನ್ನು ಕಲ್ಲುಗಳನ್ನೂ ಎಸೆದರು.

ದ. ಕೋರಿಯದ ಸರಕಾರ ವಿದ್ಯಾರ್ಥಿಗಳಿಗೆ ಒತ್ತಾಯದ ಸೈನಿಕ ಶಿಕ್ಷಣ ಕೊಡುತ್ತಿರುವುದನ್ನು ವಿರೋಧಿಸಲಾಗುತ್ತಿದೆ. ವಿಶ್ವವಿದ್ಯಾಲಯದ ವಾಚನಾಲಯವನ್ನು ವಿದ್ಯಾರ್ಥಿಗಳು ವಶಪಡಿಸಿಕೊಂಡು ಪೋಲೀಸರ ವಿರುದ್ಧ ಹೋರಾಡುತ್ತಿದ್ದಾರೆ. ತಮಗೆ ಮಿಲಿಟರಿ ಟ್ರೈನಿಂಗ್ ಕೊಟ್ಟು ತಮ್ಮನ್ನು ಅಮೇರಿಕಕ್ಕೆ ಸಹಾಯ ಮಾಡುವ ಅನುಧಾನ ಸೈನಿಕರನ್ನಾಗಿ ಪರಿಗಣಿಸಲಾಗುತ್ತಿದೆಂದು ಪ್ರತಿಭಟಿಸಿ ವಿದ್ಯಾರ್ಥಿಗಳು ಹೋರಾಡುತ್ತಿದ್ದಾರೆ.

ಕೋರಿಯದ ವಿದ್ಯಾರ್ಥಿಗಳು ಜನತೆಯೂ ಎಷ್ಟು ಧೈರ್ಯದಿಂದ ಅಮೇರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡುತ್ತಿದ್ದಾರೆಂಬುದಕ್ಕೆ ಇದು ಉದಾಹರಣೆ.

## ಹದಿನೈದು ರಾಜ್ಯಗಳಲ್ಲಿ ಬೆಳೆ ವಿಮೆ ಯೋಜನೆ

ಬರಗಾಲ, ನೆರೆಹಾವಳಿ, ಬಿರುಗಾಳಿಗಳಿಂದಾಗಿ ಹಾನಿ ಅನುಭವಿಸುತ್ತಿರುವ ರೈತರಿಗೆ ಸಹಾಯವಾಗಲು 15 ರಾಜ್ಯ ಮತ್ತು 2 ಕೇಂದ್ರಾಡಳಿತ ಪ್ರದೇಶದಲ್ಲಿ ಬೆಲೆ ವಿಮಾ ಯೋಜನೆಯನ್ನು ಜಾರಿ ಮಾಡಲಾಗಿದೆ,

ರಾಜ್ಯ ಸರಕಾರಗಳು ಪ್ರಾರಂಭದಲ್ಲಿ ರೂ. 1.2ಕೋಟಿಯಷ್ಟು ಬೆಳೆ ವಿಮಾ ಬಂಡವಾಳ ಹೂಡಬೇಕೆಂದು, ಅಷ್ಟೇ ಹಣವನ್ನು ಕೇಂದ್ರವೂ ಕೊಡಮಾಡುತ್ತದೆಂದು ಪ್ರಕಟಿಸಲಾಗಿದೆ, 1985 ರಿಂದಲೇ ಅದನ್ನು ಜಾರಿಮಾಡಬೇಕೆಂದು ಆದೇಶ ನೀಡಲಾಗಿದೆ. ಆಂಧ್ರಪ್ರದೇಶ, ಅಸ್ಸಾಂ, ಬಿಹಾರ, ಗುಜರಾತ್,ಹಿಮಾಚಲ ಪ್ರದೇಶ, ಜಮ್ಮು —ಕಾಶ್ಮೀರ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಒರಿಸ್ಸಾ, ತಮಿಳುನಾಡು, ತ್ರಿಪುರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಲ ಸರಕಾರಗಳು ಈ ಯೋಜನೆಯನ್ನು ಈಗಾಗಲೇ ಕಾರ್ಯರೂಪದಲ್ಲಿ ತಂದಿವೆ.

ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಈ ಬೆಳೆ ವಿಮೆಯ ಉಪಯೋಗ ನಿಜವಾದ ರೈತರಿಗೆ ಸಿಗುವಂತೆ ಪ್ರಯತ್ನ ಮಾಡಬೇಕು.

## ಆಳಂದ ರೈತ ಸಂಘದ ವಿಜಯ

ಕರ್ನಾಟಕ ಪ್ರಾಂತ ರೈತ ಸಂಘ ಆಳಂದ ತಾಲೂಕ ಘಟಕವು, ಸಾಲ ವಸೂಲಿ ನಿಲ್ಲಿಸಲು, ಬರ ಪರಿಹಾರಕ್ಕೆ ಸಹಕರಿಸಲು, ಭಾವಿತೋಡಿಸಲು, ಸಾಲ ಒದಗಿಸಲು ಐ. ಆರ್. ಡಿ. ಪಿ. ಯಲ್ಲಿ ಬಡ ರೈತ ಕೃಷಿ ಕೂಲಿಕಾರರಿಗೆ ಸಾಲ ಒದಗಿಸಲು ಮತ್ತು ಹಳ್ಳಿಗಳನ್ನು ದತ್ತು ತೆಗೆದುಕೊಂಡು ಸಾಲ ಒದಗಿಸಲು ಒತ್ತಾಯಿಸಿ ಕೃಷ್ಣ ಗ್ರಾಮೀಣ ಬ್ಯಾಂಕ್ ಶಾಖೆಗಳಾದ ಚಿಂಚನಸೊರದಲ್ಲಿ ಬಸವರಾಜ ಜವಳಿಯವರ ನೆತೃತ್ವದಲ್ಲಿ, ಲಾಡ ಮುಗಳಿಯಲ್ಲಿ ಬಾಬು ಸೂಗೂರ ಅವರ ಸಂಚಾಲಕತ್ವದಲ್ಲಿ ಸಾಲಗಾರದಲ್ಲಿ ಮೊದುರಾಯ ದನ್ನುರ ಅವರ ಸಂಚಾಲಕತ್ವದಲ್ಲಿ ಸರದಿ ಉಪವಾಸ ಸತ್ಯಾಗ್ರಹ ನಡೆಸಲಾಯಿತು.

ಸರದಿ ಉಪವಾಸ ಸತ್ಯಾಗ್ರಹ 6 ದಿವಸ ನಡೆದು ಬ್ಯಾಂಕ ಆಡಳಿತ ವರ್ಗ ಮತ್ತು ರೈತ ಸಂಘದ ನಡುವೆ ಒಪ್ಪಂದ ಏರ್ಪಟ್ಟು ಬೇಡಿಕೆ ಈಡೇರಿಸುವುದಾಗಿ ಬರೆದು ಕೊಟ್ಟನಂತರ ಉಪವಾಸ ಮುಷ್ಕರ ಹಿಂತೆಗೆದುಕೊಳ್ಳಲಾಯಿತು.

ಉಪವಾಸ ಮುಷ್ಕರದ ಮುಕ್ತಾಯದ ಅಂಗವಾಗಿ ಏರ್ಪಡಿಸಿದ ಬಹಿರಂಗ ಸಭೆಗಳಲ್ಲಿ ಸಲಗರದಲ್ಲಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿ, ಸಿ. ಎ. ಪಾಟೀಲ ಮಾತನಾಡಿದರು. ಲಾಡ ಮುಗಳಿಯಲ್ಲಿ ತಾಲೂಕ ಕಾರ್ಯದರ್ಶಿ ಬಾಬು ಮುಗಳಿ, ಮಾನು ಮೊದುರಾಯನ್ನೂರ ಮಾತನಾಡಿದರು ಅಂಬಲಗಾದಲ್ಲಿ ಬಸವರಾಜ ಜವಳಿ, ಮೇಘರಾಜ ಕಠಾರೆ, ಕಾ. ಮಾನು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕುದಮುಂಡದಲ್ಲಿ ಚಿಂಚನಸೊರದಲ್ಲಿ ಬಸವರಾಜ ಜವಳಿ, ಮಾನು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಈ ಹೋರಾಟದಲ್ಲಿ 16 ಹಳ್ಳಿಗಳ ರೈತ ಕೃಷಿ ಕೂಲಿಕಾರರು ಪಾಲ್ಗೊಂಡಿದ್ದರು.

# ಆರ್ಥಿಕ ಸಮೀಕ್ಷೆ:

# ಭೀಕರ ಬರಗಾಲ

# ಅಸಮರ್ಪಕ ಪರಿಹಾರ

ದೇಶದಲ್ಲಿ ಈ ವರ್ಷ ಭೀಕರ ಬರಗಾಲ ಹಬ್ಬಿದೆ. 1986-86 ರಲ್ಲಿ 14 ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸುಮಾರು 260 ಜಿಲ್ಲೆಗಳಲ್ಲಿ 14 ಕೋಟಿ ಜನರು ಬರಗಾಲದ ತೀವ್ರ ಬೇಗೆಗೆ ಗುರಿಯಾಗಿದ್ದಾರೆ. ಜೊತೆಗೇ 11 ಕೋಟಿ ಜಾನುವಾರುಗಳೂ ಅತೀವ ದುಸ್ಥಿತಿಗೊಳಗಾಗಿವೆ. ಹಿಂದಿನ ವರ್ಷ 1984-85 ರಲ್ಲಿ ದೇಶದ 167 ಜಿಲ್ಲೆಗಳಲ್ಲಿ 10 ಕೋಟಿ ಜನರು ಬರಗಾಲಕ್ಕೊಳಗಾಗಿದ್ದರು. ಮುಖ್ಯವಾಗಿ, ರಾಜಸ್ಥಾನ, ಗುಜರಾತ್ ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳು ಅತ್ಯಧಿಕ ಬರಗಾಲ ಪೀಡಿತ ಪ್ರದೇಶಗಳು. ರಾಜಸ್ಥಾನ ಮತ್ತು ಕರ್ನಾಟಕ ರಾಜ್ಯಗಳು ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಸದ್ಯದ ಬರಗಾಲದಿಂದ ಉಂಟಾದ ಉದ್ಯೋಗ, ಆಹಾರ, ನೀರು, ಮೇವು, ವಸತಿ, ಆರೋಗ್ಯ ಇತ್ಯಾದಿ ಸಮಸ್ಯೆಗಳನ್ನು ಗಮನಿಸಿದರೆ, ಆಫ್ರಿಕದ ಇಥಿಯೋಪಿಯಾ ಮತ್ತು ಲ್ಯಾಟಿನ್ ಅಮೇರಿಕದ ಬ್ರೆಝಿಲ್ ದೇಶಗಳಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ಸಂಭವಿಸಿದ ಭೀಕರ ಬರಗಾಲದ ನೆನಪುಗಳು ಮರುಕಳಿಸುತ್ತವೆ.

## ಕಷ್ಟನಷ್ಟಗಳು

ಕೇಂದ್ರ ಕೃಷಿ ಇಲಾಖೆಯ ಪ್ರಕಟಣೆಯಂತೆ, ಬರಗಾಲ ಪರಿಸ್ಥಿತಿಯಿಂದ 1985-86 ರಲ್ಲಿ 435ಲಕ್ಷ ಹೆಕ್ಟೇರ್ ವ್ಯವಸಾಯ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಬೆಳೆಯು ನಾಶವಾಗಿದೆ ಅಥವಾ ತುಂಬಾ ಇಳಿಮುಖವಾಗಿದೆ. ಈ ವರ್ಷ ಒಟ್ಟು ಆಹಾರ ಧಾನ್ಯಗಳ ಉತ್ಪಾದನೆಯು 150 ಮಿ.ಟನ್‌ಗಳಿಗೆ ಮೀರಲಾರದು. ಪರಿಣಾಮವಾಗಿ, ಏಳನೆ ಯೋಜನೆಯ (1985-86 ರಿಂದ 1990-91) ಮೊದಲನೇ ವರ್ಷದಲ್ಲಿ 160 ಮಿ. ಟನ್ ಹಾಗೂ ಕೊನೆಯ ವರ್ಷದಲ್ಲಿ 178-183 ಮಿ. ಟನ್ ಆಹಾರ ಧಾನ್ಯಗಳ ಉತ್ಪಾದನೆಯ ಗುರಿ ಸಾಧನೆ ದೂರ ಉಳಿಯುವುದು. ಗುಜರಾತಿನ ಸೌರಾಷ್ಟ್ರ ಪ್ರದೇಶದಲ್ಲಿಯೇ ಬರಗಾಲದಿಂದಾಗಿ ರೂ. 1300 ಕೋಟಿ ಬೆಲೆಬಾಳುವ ನೆಲಗಡಲೆ, ಹತ್ತಿ, ಇತರ ಹಣದ ಬೆಳೆಗಳು ನಾಶವಾಗಿವೆ ಎಂದು ವರದಿಯಾಗಿದೆ. ಆದುದರಿಂದ ಎಣ್ಣೆ, ಬೀಜ, ಅಡಿಗೆ ತೈಲದಲ್ಲಿ ಸ್ವಾವಲಂಬನೆ ಸಾಧಿಸುವ ಗುರಿಯೂ ಅಸಾಧ್ಯವಾಗಿದೆ. ಗುಜರಾತ್, ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳಲ್ಲಿಯೂ ಆಹಾರ ಧಾನ್ಯಗಳ ಹಾಗೂ ಹಣದ ಬೆಳೆಗಳು ಭಾರೀ ಪ್ರಮಾಣದಲ್ಲಿ ನಷ್ಟವಾಗಿವೆ. ಕರ್ನಾಟಕದಲ್ಲಿ ಈ ವರ್ಷದಲ್ಲಿ 89 ಲಕ್ಷ ಆಹಾರ ಧಾನ್ಯಗಳ ಫಸಲು ನಿರೀಕ್ಷಿಸಲಾಗಿದ್ದರೂ, ಬರಗಾಲದಿಂದಾಗಿ ಶೇ 50 ಕ್ಕಿಂತಲೂ ಹೆಚ್ಚು ಬೆಳೆ ನಾಶವಾಗಿದೆ ಎಂದು ಭಯಪಡಲಾಗಿದೆ. ಅಪಾರ ಬೆಳೆ ಹಾನಿಯೊಂದಿಗೇ ಬೃಹತ್ ಪ್ರಮಾಣದಲ್ಲಿ ಪಶುಸಂಪತ್ತು ನಾಶವಾಗುತ್ತಿದೆ.

ಬರಗಾಲದ ಎಲ್ಲಾ ಕಷ್ಟನಷ್ಟಗಳ ಭಾರವು ಹೆಚ್ಚಾಗಿ ಲಕ್ಷಾಂತರ ಕೃಷಿ ಕಾರ್ಮಿಕರ, ಬಡರೈತರ ಮತ್ತು ಗ್ರಾಮೀಣ ಪ್ರದೇಶದಿಂದ ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋದ ಅಸಂಖ್ಯಾತ ಬಡ ಜನರ ಮೇಲೆಯೇ ಬೀಳುತ್ತಿದೆ. ವರ್ಷ ವರ್ಷವೂ ದೇಶದ ಒಂದಲ್ಲ ಒಂದು ಭಾಗದಲ್ಲಿ ಸಂಭವಿಸುತ್ತಿರುವ ನೆರೆ, ಬರಗಾಲಗಳಂತಹ ನೈಸರ್ಗಿಕ ಅನಾಹುತಗಳ ವಿರುದ್ಧ ಜನಕೋಟಿಯನ್ನು ರಕ್ಷಿಸಲು ಸರಕಾರ ಕೈಕೊಂಡ ದೀರ್ಘಕಾಲಿಕ ಹಾಗೂ ತಾತ್ಕಾಲಿಕ ಪರಿಹಾರ ಕಾರ್ಯಕ್ರಮಗಳು ತೀರಾ ಅಸಮರ್ಪಕವಾಗಿವೆ.

ಬರಗಾಲ ಪರಿಹಾರಕ್ಕೆ ದೀರ್ಘಕಾಲಿಕ ಪರಿಹಾರವೆಂದರೆ, ದೇಶದ ಹೆಚ್ಚಿನ ವ್ಯವಸಾಯ ಭೂಮಿಗೆ ನೀರಾವರಿ ಸೌಕರ್ಯ ಒದಗಿಸುವುದು ಮತ್ತು ಹಳ್ಳಿ ಪಟ್ಟಣಗಳಲ್ಲಿರುವ ಸಮಸ್ತ ಜನರಿಗೆ ಕುಡಿಯಲು ನಿರ್ಮಲ ನೀರು ಸರಬರಾಜು ಮಾಡುವುದು. ಜಲಸಂಪತ್ತನ್ನು ಉಳಿಸಲು, ಗಳಿಸಲು ಅರಣ್ಯ ಸಂಪತ್ತನ್ನು ರಕ್ಷಿಸುವುದು, ಅಭಿವೃದ್ಧಿಗೊಳಿಸುವುದು ಅತ್ಯಗತ್ಯ ಎಂದು ಪರಿಸರ ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಸ್ವಾತಂತ್ರ್ಯೋತ್ತರದ ನಾಲ್ಕು ದಶಕಗಳಲ್ಲಿ ಆರ್ಥಿಕ ಅಭಿವೃದ್ಧಿಯ ನೆಪದಲ್ಲಿ ವಿವೇಚನೆ ಇಲ್ಲದೆ ಭಾರಿ ಪ್ರಮಾಣದಲ್ಲಿ ನಮ್ಮ ಅರಣ್ಯ ಸಂಪತ್ತನ್ನು ನಾಶ ಮಾಡುತ್ತಾ ಬಂದುದರಿಂದಲೇ ಅಗಾಗ ಭೀಕರ ಬರಗಾಲವನ್ನು ನಾವು ಎದುರಿಸುತ್ತಿರುವುದೆಂದು ತಜ್ಞರ ಅಭಿಪ್ರಾಯವಾಗಿದೆ.

## ಅರಣ್ಯನಾಶ

ದೇಶದ ಒಟ್ಟು ಅರಣ್ಯ ಕ್ಷೇತ್ರ 75 ಮಿ. ಹೆಕ್ಟೇರ್, ಇದು ಒಟ್ಟು ಭೂಭಾಗದ ಶೇ 23 ರಷ್ಟಾಗಿದೆ. ಪರಿಸರ ರಕ್ಷಣೆಯ ದೃಷ್ಟಿಯಿಂದ ಕನಿಷ್ಠ ಅರಣ್ಯ ಕ್ಷೇತ್ರ ಭೂಭಾಗದ ಶೇ33 ರಷ್ಟಾದರೂ ಇರಬೇಕು. ಭಾರತದ ಜನಸಂಖ್ಯೆಯ ಸರಾಸರಿ ಅರಣ್ಯಕ್ಷೇತ್ರ 0.11ಹೆಕ್ಟೇರ್ (ಕಾಲು ಎಕ್ರೆ) ದೇಶದ ಜನಸಂಖ್ಯೆ ಜಗತ್ತಿನ ಜನಸಂಖ್ಯೆಯ (4335ಮಿ.) ಶೇ 16.4 ರಷ್ಟಾಗಿದ್ದರೂ; ದೇಶದ ಅರಣ್ಯ ಸಂಪತ್ತು ಜಗತ್ತಿನ ಅರಣ್ಯ ಸಂಪತ್ತಿನ (4057 ಮಿ. ಹೆ.) ಶೇ 1.85 ರಷ್ಟೇ ಆಗಿದೆ. 1950 ರಿಂದ 1980 ರ ಮೂವತ್ತು ವರ್ಷಗಳ ಅವಧಿಯಲ್ಲಿ ಮಿಲಿಟರಿ, ನಿರಾವರಿ, ವಿದ್ಯುತ್, ಸಾರಿಗೆ ಸಂಪರ್ಕ, ಉರುವಲು, ಇತರ ಕೈಗಾರಿಕೆಗಳಿಗಾಗಿ 40 ಲಕ್ಷ ಹೆಕ್ಟೇರ್ ಅರಣ್ಯ ಸಂಪತ್ತನ್ನು ನಾಶ ಮಾಡಿರುವುದಾಗಿ ತಿಳಿದು ಬಂದಿದೆ. (ಮನೋರಮಾ ಕೈಪಿಡಿ: 1984) ಬೃಹತ್ ಪ್ರಮಾಣದಲ್ಲಿ ಅರಣ್ಯ ನಾಶವಾಗುತ್ತಿರುವುದರಿಂದ ಇತ್ತೀಚಿಗೆ ಬರಗಾಲ ಭಾದೆ ಹಳ್ಳಿಗಳಿಂದ ಪಟ್ಟಣಗಳಿಗೂ ಹಬ್ಬುತ್ತಿದೆ. ಗುಜರಾತಿನ ರಾಜಕೋಟ್ ಮತ್ತು ಕರ್ನಾಟಕದ ಬೆಂಗಳೂರು ಇದಕ್ಕೆ ಉದಾಹರಣೆಗಳಾಗಿವೆ. ಅರಣ್ಯಸಂಪತ್ತಿನ 95 ರಷ್ಟು ಸರಕಾರದ ಸ್ವಾಮ್ಯದಲ್ಲಿದೆ. ಆದರೆ ಬಿದಿರು, ಇತ್ಯಾದಿ ಅರಣ್ಯ ಉತ್ಪಾದನೆಗಳನ್ನು ಖಾಸಗೀ ಭೂಮಾಲಿಕರಿಗೆ, ದಲ್ಲಾಳಿ ವ್ಯಾಪಾರಿಗಳಿಗೆ, ಬಂಡವಾಳ ಶಾಹಿ ಕೈಗಾರಿಕೋದ್ಯಮಿಗಳಿಗೆ, ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಬಹಳ ಅಗ್ಗದ ದರಗಳಲ್ಲಿ ಬಳಸಲು ಅಧಿಕ ಲಾಭ ಗಿಟ್ಟಿಸಲು ಸರಕಾರ ಸಹಕರಿಸುವುದು. ಭಾರತವೂ ಸೇರಿದಂತೆ, ಅಭಿವೃದ್ಧಿ ಹೊಂದುತ್ತಿರುವ ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿ ವಿಶ್ವ ಬ್ಯಾಂಕ್ ಮತ್ತಿತರ ಬಹುರಾಷ್ಟ್ರೀಯ ಬ್ಯಾಂಕುಗಳು ಅಭಿವೃದ್ಧಿ ಯೋಜನೆಗಳಿಗೆ ಸಾಲ ಸಹಾಯ ನೀಡುವಾಗ, ಪರಿಸರ ಸಂರಕ್ಷಣೆಗೆ ಹೆಚ್ಚಿನ ಗಮನ ಕೊಡುತ್ತಿಲ್ಲ ಎಂದೂ ಈ ದೇಶಗಳಲ್ಲಿ ಭಾರೀ ಪ್ರಮಾಣದಲ್ಲಿ ಅರಣ್ಯಸಂಪತ್ತು ನಾಶವಾಗುತ್ತಿದೆ ಎಂದೂ ಇತ್ತೀಚಿಗೆ ಅಮೇರಿಕದ ರಿಪಬ್ಲಿಕನ್ ಪಕ್ಷದ ಮೂವರು ಸೆನೆಟರುಗಳು ಆಪಾದಿಸಿದ್ದಾರೆ. (ಇಂಡಿಯನ್ ಎಕ್ಸ್‌ಪ್ರೆಸ್, 4-5-86)

ರಷ್ಯಾ, ಚೀನಾ ಮುಂತಾದ ಸಮಾಜವಾದಿ ದೇಶಗಳಲ್ಲಿ ಆರ್ಥಿಕ ಅಭಿವೃದ್ಧಿಯ ಜೊತೆಗೇ ಅರಣ್ಯ ಸಂಪತ್ತಿನ ರಕ್ಷಣೆ ಹಾಗೂ ಅಭಿವೃದ್ಧಿಯಾಗುವುದು ಪರಿಸರ ಸಂರಕ್ಷಣೆಯಾಗುವುದು. ಸೈಬೀರಿಯಾದಂತಹ ಮರುಭೂಮಿಯನ್ನು ಅರಣ್ಯ ಸಂಪತ್ತಿನ ಅಭಿವೃದ್ಧಿಗಾಗಿ ಬಳಸಲು ಸಾಧ್ಯವಾಗುತ್ತಿದೆ. ಆರ್ಥಿಕ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ಸಮಾಜವಾದಿದೇಶಗಳಲ್ಲಿಒಂದಕ್ಕೊಂದು ಪೂರಕವಾಗಿದ್ದು, ಭಾರತದಂತಹ ಬಂಡವಾಳಶಾಹಿ ಸಮಾಜದಲ್ಲಿ ಅವುಗಳು ಒಂದಕ್ಕೊಂದು ವಿರುದ್ಧವಾಗಿರುವ ವಿಪರ್ಯಾವನ್ನು ಗಮನಿಸಬೇಕು. ಖಾಸಗೀ ಲಾಭ, ಆಸ್ತಿಗಳೇ ಸಮಾಜದ ಪ್ರಧಾನ ಜೀವನ ಮೌಲ್ಯಗಳಾಗಿರುವಷ್ಟು ಕಾಲ ಪರಿಸರ ಸಂರಕ್ಷಣೆ, ಅರಣ್ಯ ರಕ್ಷಣೆ, ಬರಗಾಲ ನಿವಾರಣೆ ಅಸಾಧ್ಯ.

## ಅಸಮರ್ಪಕ ನೀರಾವರಿ

ಜಲಸಂಪತ್ತನ್ನು ರಕ್ಷಿಸಿ, ಅಭಿವೃದ್ಧಿಗೊಳಿಸಿ ವ್ಯವಸಾಯ ಹಾಗೂ ಕುಡಿಯುವ ನೀರಿಗಾಗಿ ಬಳಸುವುದು ಬರಗಾಲ ನಿವಾರಣೆಯ ಇನ್ನೊಂದು ದೀರ್ಘಕಾಲಿಕ ಪರಿಹಾರವಾಗಿದೆ. ಇದರಲ್ಲಿಯೂ ಭಾರತ ಬಹಳ ಹಿಂದುಳಿದಿದೆ. ದೇಶದ ಒಟ್ಟು ಜಲ ಸಂಪತ್ತು 178 ಮಿ. ಹೆಕ್ಟರ್ ಮೀಟರ್ ಎಂದು ಅಂದಾಜು ಮಾಡಲಾಗಿದ್ದು, ಸದ್ಯದ ವಿಜ್ಞಾನ-ತಂತ್ರಜ್ಞಾನದ ಮೂಲಕ 67 ಮಿ.ಹೆ ಮೀ. ಮೇಲ್ಮೈಯ ಜಲಸಂಪತ್ತನ್ನು 26.5 ಮೀ. ಹೆ ಮೀ. ಭೂಗತ ಜಲ ಸಂಪತ್ತನ್ನು ಉಪಯೋಗಿಸಬಹುದಾಗಿದೆ ಒಟ್ಟು 210 ಮಿ. ಹೆಕ್ಟರ್ ವ್ಯವಸಾಯ ಭೂಮಿಯಲ್ಲಿ ಶೇ 50 ಕ್ಕಿಂತಲೂ ಹೆಚ್ಚು ಅಂದರೆ 113 ಮಿ. ಹೆಕ್ಟರ್ ಭೂಮಿಗೆ ನೀರಾವರಿ ಸೌಕರ್ಯ ಒದಗಿಸುವ ಸಾಧ್ಯತೆ ಇದೆ, ಆದರೆ ಇದು ತನಕ, 1981-82 ರ ವರೆಗೆ, ದೇಶದಲ್ಲಿ ಸಾಧಿಸಿದ ನೀರಾವರಿ ಸೌಕರ್ಯದ ಸಾಮರ್ಥ್ಯ 61.3 ಮಿ ಹೆಕ್ಟರ್ ವ್ಯವಸಾಯ ಭೂಮಿಗೆ ನೀರಾವರಿ ಒದಗಿಸುವಷ್ಟು ಮಾತ್ರ. ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ತಾಂತ್ರಿಕ ಸಮಸ್ಯೆ, ವಿಳಂಬ, ಭ್ರಷ್ಟಾಚಾರ, ರಾಜಕೀಯ ಹಸ್ತಕ್ಷೇಪ ಭೂಸಮಸ್ಯೆಯ ಜಗಳಗಳು, ನೀರು ಸಾಗಾಟದ ಸಮಸ್ಯೆ, ವಿವಿಧ ಇಲಾಖೆಗಳೊಳಗಿನ ಹೊಂದಾಣಿಕೆಯಲ್ಲಿ ಅಭಾವ ನಿತ್ಯಾದಿ ಕಾರಣಗಳಿಂದ ಸ್ಥಾಪಿತ ನೀರಾವರಿ ಸಾಮರ್ಥ್ಯದ ಶೇ. 50 ರಷ್ಟು ಕೂಡಾ ವ್ಯವಸಾಯಕ್ಕೆ ಉಪಯುಕ್ತವಾಗಿ ಬಳಸಲಾಗುತ್ತಿಲ್ಲ. ಇಂದಿಗೂ ಶೇ 70 ರಷ್ಟು ವ್ಯವಸಾಯ ಭೂಮಿ ನಿರಂತರ ನಿರಾವರಿ ಸೌಕರ್ಯವಿಲ್ಲದೆ, ಮಳೆ ನೀರನ್ನೇ ಅವಲಂಬಿಸಬೇಕಾಗಿರುವುದು. ಪರಿಣಾಮವಾಗಿ, ಒಂದೇ ಬರಗಾಲದಿಂದ ದೇಶದ ಆಹಾರ ಧಾನ್ಯಗಳು ಮತ್ತಿತರ ಕೃಷಿ ಉತ್ಪಾದನೆಗಳು ಹಾಗೂ ಸಂಬಂಧಿತ ಕೈಗಾರಿಕೋತ್ಪಾದನೆಗಳು ಗಣನೀಯವಾಗಿ ಏರು-ಪೇರುಗೊಳ್ಳುವುವು. ದೇಶದ ನೂರಕ್ಕೆ ನೂರರಷ್ಟು ಜನರಿಗೆ ಕುಡಿಯಲು ನಿರ್ಮಲ ನೀರು ಸರಬರಾಜು ಮಾಡುವ ಗುರಿಯೂ 1991 ರಷ್ಟರಲ್ಲಿಯೂ ಸಾಧಿಸಲಸಾಧ್ಯ ಎಂದು ಕೇಂದ್ರ ಮಂತ್ರಿ ಅಬ್ದುಲ್ ಗಫೂರ್ ಇತ್ತೀಚಿಗೆ ಸಂಸತ್ತಿನಲ್ಲಿ ತಿಳಿಸಿದ್ದಾರೆ.

## ರಾಜಕೀಯ ಪಕ್ಷಪಾತ

ಬರಗಾಲ ಪೀಡಿತ ಪ್ರದೇಶಗಳಲ್ಲಿ ಉದ್ಯೋಗ, ಆಹಾರ, ನೀರು, ಮೇವು, ವಸತಿ, ಆರೋಗ್ಯ, ಇತ್ಯಾದಿ ತಾತ್ಕಾಲಿಕ ಪರಿಹಾರಗಳನ್ನು ಬೃಹತ್ ಪ್ರಮಾಣದಲ್ಲಿ ಒದಗಿಸುವ ಪೂರ್ಣ ಜವಾಬ್ದಾರಿ ನೇರವಾಗಿ ರಾಜ್ಯ ಸರಕಾರಗಳ ಮೇಲೆಯೇ ಬೀಳುವುದು. ರಾಜ್ಯ ಸರ್ಕಾರಗಳು ಮೊದಲೇ ಸಂಪನ್ಮೂಲಗಳ ಕೊರತೆಯಿಂದ ಒದ್ದಾಡುತ್ತಿವೆ. ಕೇಂದ್ರದ ಬಿಗಿ ನೀತಿಯಿಂದ ರಾಜ್ಯ ಸರ್ಕಾರಗಳು ಇತ್ತೀಚಿಗೆ ಓವರ್ ಡ್ರಾಫ್ಟ್ ಸೌಲಭ್ಯ ಪಡೆಯಲೂ ಸಾಧ್ಯವಿಲ್ಲ. ಆದುದರಿಂದ, ಆರ್ಥಿಕ ಅಭಿವೃದ್ಧಿಯ ಜೊತೆಗೇ ಬರಗಾಲ ಪರಿಹಾರ ಕಾರ್ಯಗಳಿಗೂ ರಾಜ್ಯ ಸರ್ಕಾರಗಳು ಸಂಪನ್ಮೂಲಗಳಿಗಾಗಿ ಕೇಂದ್ರ ಸರ್ಕಾರದ ಕೃಪಾಕಟಾಕ್ಷವನ್ನೇ ಅವಲಂಬಿಸಬೇಕಾಗುವುದು. ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರದಲ್ಲಿರುವ ಒಕ್ಕೂಟ ಪದ್ಧತಿಯಲ್ಲಿ ಆರ್ಥಿಕ ಅಭಿವೃದ್ಧಿಗಾಗಲೀ, ಬರಗಾಲಗಳಂತಹ ನೈಸರ್ಗಿಕ ಅನಾಹುತಗಳ ವಿರುದ್ಧ ಪರಿಹಾರ ಕಾರ್ಯಗಳಿಗಾಗಲೀ ರಾಜ್ಯಗಳಿಗೆ ಕೇಂದ್ರ ನೆರವು ನೀಡುವುದರಲ್ಲಿ ವಸ್ತುನಿಷ್ಠವಾದ ಮಾರ್ಗದರ್ಶನವಿಲ್ಲ. ಬದಲು ಕೇಂದ್ರದ ಐಚ್ಛಿಕ ಅಧಿಕಾರವೇ ಹೆಚ್ಚಾಗಿದೆ. ಪರಿಣಾಮವಾಗಿ, ಪರಿಹಾರ ಕಾರ್ಯಗಳಿಗೆ ನೆರವು ನೀಡುವುದರಲ್ಲಿಯೂ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರ ಕಾಂಗ್ರೆಯೇತರ ರಾಜ್ಯ ಸರ್ಕಾರಗಳ ವಿರುದ್ಧ ಪಕ್ಷಪಾತ ಮಾಡುತ್ತಿದೆ. 1985-86 ರಲ್ಲಿ ಕೇಂದ್ರ, ರಾಜ್ಯಗಳಿಗೆ ಬರಗಾಲ ಪರಿಹಾರಕ್ಕಾಗಿ ನೀಡಿದ ಸಹಾಯಧನವನ್ನು ಪರಿಶೀಲಿಸಿದರೆ, ಈ ಪಕ್ಷಪಾತ ಧೋರಣೆಯು ಸ್ಪಷ್ಟವಾಗುವುದು.

ಕೇಂದ್ರದ ಬಿಗಿ ನೀತಿಯಿಂದಾಗಿ, ರಾಜ್ಯದ ಬೇಡಿಕೆಗಳಲ್ಲಿ ಸ್ವಲ್ಪ ಉತ್ಪ್ರೇಕ್ಷೆ ಇದ್ದಿರಬಹುದು. ಆದರೆ, ಬೇಡಿಕೆಗಳ ಅರ್ಧಾಂಶ, ಕನಿಷ್ಠ ಕಾಲಂಶದಷ್ಟು ಕೇಂದ್ರ ಬರಗಾಲ ಪರಿಹಾರ ಕಾರ್ಯಗಳಿಗೆ ನೆರವು ನೀಡದಿರುವುದನ್ನು ಗಮನಿಸಬೇಕು. ಅಲ್ಪಸ್ವಲ್ಪ ನೆರವು ನೀಡಿದುದರಲ್ಲಿಯೂ ಕಾಂಗ್ರೆ ಆಡಳಿ

| ರಾಜ್ಯಗಳು | ರಾಜ್ಯಗಳ ಬೇಡಿಕೆ (ರೂ. ಕೋಟಿ) | ಕೇಂದ್ರದ ನೀಡಿಕೆ (ರೂ. ಕೋಟಿ) | ಶೇಕಡಾಂಶ |
|---|---|---|---|
| ಆಂಧ್ರ | 1000.60 | 63.09 | 6.30 |
| ಕರ್ನಾಟಕ | 511.23 | 55.03 | 10.78 |
| ಮಹಾರಾಷ್ಟ್ರ | 664.37 | 87.24 | 13.13 |
| ರಾಜಸ್ಥಾನ | 649.55 | 98.65 | 15.18 |
| ಗುಜರಾತ್ | 405.30 | 82.48 | 20.35 |

(ಆಧಾರ: 'ಹಿಂದೂ' ಗುಂಪಿನ ಫ್ರಂಟ್ ಲೈನ್ ಪಾಕ್ಷಿಕಪತ್ರಿಕೆ, 16 ಮೇ 86)

ಕದ ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್ ರಾಜ್ಯಗಳಿಗೆ ಕಾಂಗ್ರೆಯೇತರ ಆಂಧ್ರ ಮತ್ತು ಕರ್ನಾಟಕ ರಾಜ್ಯಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಸಂದಿರುವುದನ್ನೂ ಗಮನಿಸಬೇಕು. ಕೇಂದ್ರದ ಗೋದಾಮುಗಳಲ್ಲಿ ೭5-30 ಮಿ.ಟನ್ ಆಹಾರ ಧಾನ್ಯಗಳ ಸಂಗ್ರಹವಿದ್ದರೂ ಅವುಗಳಲ್ಲಿ ಶೇ 10 ರಷ್ಟಾದರೂ ಬರಗಾಲ ಪರಿಹಾರ ಕಾರ್ಯಗಳಿಗೆ ಕೆಲಸಕ್ಕೆ ಕಾಳಿನ ರೂಪದಲ್ಲಿ ಕೂಲಿ ಕೊಡಲು ರಾಜ್ಯಗಳಿಗೆ ಬಿಡುಗಡೆ ಮಾಡಲಿಲ್ಲ. ಆಂಧ್ರ, ಕರ್ನಾಟಕ ತಮ್ಮದೇ ಆದ ಆಹಾರ ಧಾನ್ಯಗಳ ಸಂಗ್ರಹ ಕಾರ್ಯಗಳನ್ನು ಕೈಗೊಳ್ಳಲೂ ಕೇಂದ್ರ ಅನುಮತಿ ನೀಡುವುದಿಲ್ಲ.

ಬರಗಾಲದ ಅಭಾವ ಪರಿಸ್ಥಿತಿಯಲ್ಲಿಯೂ ಆಹಾರ ಧಾನ್ಯಗಳ ಸಂಗ್ರಹಣೆಯನ್ನು ನಷ್ಟದ ಬೆಲೆಗಳಲ್ಲಾದರೂ ವಿದೇಶಗಳಿಗೆ ರಫ್ತುಮಾಡಲು ಕಾಂಗ್ರೆ ಕೇಂದ್ರ ಸರಕಾರ ಸಿದ್ಧತೆ ನಡೆಸುತ್ತಿದೆ.!

ಕೇಂದ್ರದ ಅಲ್ಪಸ್ವಲ್ಪ ನೆರವು ಸಕಾಲಕ್ಕೆ ದೊರಕುವುದಿಲ್ಲ. ಕೇಂದ್ರದ ಅಧ್ಯಯನ ತಂಡಗಳೂ, ಮಂತ್ರಿಮಾಗಧರೂ ರಾಜ್ಯಗಳಿಗೆ ಹತ್ತಾರು ಸಲ ಬೇಟಿ ಕೊಟ್ಟು ಹೋದರೂ ನೆರವು ಬರುವುದಿಲ್ಲ. ರಾಜ್ಯಗಳ ಅಧಿಕಾರಿಗಳೂ, ಮಂತ್ರಿಗಳೂ, ಮುಖ್ಯಮಂತ್ರಿಗಳೂ ಕೇಂದ್ರದ ಮನವೊಲಿಸಲು ಹತ್ತಾರು ಸಲ ದೆಹಲಿಗೆ ಭೇಟಿ ನೀಡಿದರೂ ಬರಗಾಲ ಪರಿಹಾರಕ್ಕೆ ನೆರವು ಬರುವುದಿಲ್ಲ. ಪ್ರಧಾನಿ ರಾಜೀವ ಗಾಂಧಿಯೇ ಬರಬೇಕು, ಜನರಕಣ್ಣೀರು ಒರೆಸಬೇಕು, ನಿಂತ ಕಾಲಿಗೆ ಬರಗಾಲ ಪರಿಹಾರಕ್ಕೆ ಇಷ್ಟು ಕೋಟಿ ರೂಪಾಯಿ ಹಾಗೂ ಇಷ್ಟು ಸಾವಿರ ಟನ್ ಆಹಾರ ಧಾನ್ಯಗಳನ್ನು ಕೇಂದ್ರ ಕೊಡುವುದಾಗಿ ರಾಜೀವ ಗಾಂಧಿಯೇ ಘೋಷಿಸಬೇಕು. ಅಂದರೆ ಬರಗಾಲದಲ್ಲಯೂ ಕಾಂಗ್ರೆ ರಾಜಕೀಯ ಬೆಳೆಸಬೇಕು. ಘೋಷಿತ ನೆರವನ್ನು ಪಡೆಯಲು ರಾಜ್ಯ ಸರಕಾರಗಳು ಮತ್ತೆ ದೆಹಲಿಗೆ ಪರದಾಡಬೇಕು!

ಇತ್ತೀಚೆಗೆ, ಪ್ರಧಾನಿ ರಾಜೀವ ಗಾಂಧಿ ಗುಜರಾತಿಗೆ ಮೂರುದಿನಗಳ ಭೇಟಿ ಕೊಟ್ಟ ನಂತರ ರೂ 35 ಕೋಟಿ ಮಹಾರಾಷ್ಟ್ರ ಭೇಟಿಯ ನಂತರ ರೂ 50 ಕೋಟಿ ಮತ್ತು ತಡವಾಗಿ ಕರ್ನಾಟಕಕ್ಕೆ ಬಂದ ನಂತರ ರೂ 50 ಕೋಟಿ ಧನಸಹಾಯ ಘೋಷಿಸಿದ ಜೊತೆಯಲ್ಲಿಯೇ, ಮುಖ್ಯ ಮಂತ್ರಿ ರಾಮಕೃಷ್ಣ ಹೆಗ್ಡೆ ಅಸ್ವಸ್ಥ್ಯದಿಂದ ಮಲಗಿದ್ದರೂ ಬರಗಾಲದ ಬೇಗೆಯಿಂದ ಕರ್ನಾಟಕದ ಜನ ಕೊಟಿ ಬಳಲುತ್ತಿದ್ದರೂ "ಬಾಟ್ಲಿಂಗ್ ಪ್ರಕರಣ"ವನ್ನು ಮುಂದೊಡ್ಡಿ ಹೆಗ್ಡೆ ಸರಕಾರ ರಾಜಿನಾಮೆ ಕೊಡಬೇಕೆಂದೂ ಅದಕ್ಕಾಗಿ ರಾಜ್ಯಾದಾದ್ಯಂತ ಚಳುವಳಿ ನಡೆಸಲು ಕಾಂಗ್ರೆಗೆ ಪ್ರಚೋದಿಸಿದ್ದುದನ್ನೂ ಗಮನಿಸಿದರೆ, ಬರಗಾಲ ದುಃಸ್ಥಿತಿಯನ್ನು ಕಾಂಗ್ರೆ ನಿರ್ಲಜ್ಜೆಯಿಂದ ತನ್ನ ಸ್ವಾರ್ಥ ರಾಜಕೀಯಕ್ಕೆ ಹೇಗೆ ಬಳಸುತ್ತಿದೆ ಎಂದು ಸ್ಪಷ್ಟವಾಗುವುದು.

ಕರ್ನಾಟಕಕ್ಕೆ ಸಂಬಂಧಿಸಿದಂತೆ, ಬರಗಾಲ ಪರಿಹಾರಕ್ಕೆ ಕೇಂದ್ರದ ನೆರವು ಎಷ್ಟು ಗೌಣವಾಗಿದೆ ಎಂದು ಈ ಕೆಳಗಿನ ಅಂಕೆ ಸಂಖ್ಯೆಗಳಿಂದ ತಿಳಿಯಬಹುದು. (ರೂ. ಕೋಟಿಗಳಲ್ಲಿ, ಆಧಾರ : ಕರ್ನಾಟಕ ಸುದ್ದಿ ಸಮಾಚಾರ ಇಲಾಖೆ, ಇಂಡಿಯನ್ ಎಕ್ಸ್‌ಪ್ರೆಸ್, 12-4-86)

| ವರ್ಷ | ರಾಜ್ಯದ ಬೇಡಿಕೆ | ರಾಜ್ಯದ ವೆಚ್ಚ | ಕೇಂದ್ರದ ಸಹಾಯ ಗರಿಷ್ಠ ಪರಿಮಿತಿ | ಕೇಂದ್ರದ ನಿಜವಾದ ನೆರವು |
|---|---|---|---|---|
| 1982-83 | 78.00 | 16.77 | 8.81 } | 19.13 |
| 1983-84 | 61.00 | 31.52 | 14.00 } | |
| 1984-85 | 209.50 | 39.87 | 32.73 | 29.73 |
| 1985-86 (i) | 89.00 } | 81.34 | 22.16 } | 46.70 |
| (ii) | 151.00 } | | 31.15 } | |
| (iii) | 348.00 } | | 7.43 | 6.29 |

ಹೆಚ್ಚಿನ ಪ್ರಮಾಣದಲ್ಲಿ ಕರ್ನಾಟಕ ಸರಕಾರ ಕೇಂದ್ರದ ನೆರವು ಕೇಳಿದರೆ, ಹಣ ಆಕಾಶದಿಂದ ಬರುವುದೇ, ಒಂದೇ ನೋಟು ಫ್ರಿಂಟ್ ಮಾಡಬೇಕು, ಇಲ್ಲವೇ ಕರ್ನಾಟಕದ ಜನರು ಹೆಚ್ಚು ತೆರಿಗೆ ಕೊಡಲು ತಯಾರಿರಬೇಕು. ಎಂದು ಪ್ರಧಾನಿ ರಾಜೀವ ಗಾಂಧಿಯ ಉದ್ಧಟತನದ ಹಾಗೂ ನಿರ್ದಾಕ್ಷಿಣ್ಯದ ಸವಾಲು ! ಆದರೆ, ಇಂತಹ ಸವಾಲುಗಳನ್ನು ಕಾಂಗ್ರೆ ರಾಜ್ಯ ಸರಕಾರಗಳಿಗೆ ಹಾಕುತ್ತಿಲ್ಲ ಏಕೆ ? ಅಭಿವೃದ್ಧಿ ಕಾರ್ಯಗಳಿಗಾಗಲೀ,ಬರಗಾಲಪರಿಹಾರ ಕಾರ್ಯಗಳಿಗಾಗಲೀ ಸಂಪನ್ಮೂಲ ಸಂಗ್ರಹಿಸಲು ಭೂಮಾಲಿಕ - ಬಂಡವಾಳಶಾಹಿ ಸರಕಾರಕ್ಕೆ ನೋಟು ಫ್ರಿಂಟ್ ಮಾಡುವುದು ಮತ್ತು ಬಡವರ ಮೇಲೆ ತೆರಿಗೆಯ ಭಾರ ಹೇರುವುದು ಬಿಟ್ಟರೆ ಅನ್ಯ ಮಾರ್ಗ ತಿಳಿಯದು ! ಕಾಂಗ್ರೆ ಸರಕಾರ ರೂ 40000 ಕೋಟಿ ಕಪ್ಪುಹಣ ಮುಟ್ಟಲಾರದು, ಟಾಟಾ, ಬಿರ್ಲಾ ಮುಂತಾದ ಗುತ್ತೇದಾರಿ ಕೈಗಾರಿಕೋದ್ಯಮಿಗಳ ಮತ್ತವರ ಕುಟುಂಬಗಳ ಕೋಟಿ ಗಟ್ಟಲೆ ಲಾಭ, ಆಸ್ತಿಗಳನ್ನು ಮುಟ್ಟಲಾರದು. ನೂರಾರು - ಸಾವಿರಾರು ಎಕರೆ ವ್ಯವಸಾಯ ಭೂಮಿ ಇರುವ ಶ್ರೀಮಂತ ರೈತರ ಮತ್ತು ಭೂಮಾಲಕರ ಆಸ್ತಿ, ಆದಾಯಗಳನ್ನು ಮುಟ್ಟಲಾರದು, ದೇಶದ ಸಂಪತ್ತನ್ನು ದೋಚುತ್ತಿರುವ ಬಹು ರಾಷ್ಟ್ರೀಯ ಸಂಸ್ಥೆಗಳ ಲಾಭ, ಆಸ್ತಿಗಳನ್ನು ಮುಟ್ಟಲಾರದು. ಹೆಚ್ಚೆಂದರೆ ಅವರಿಲ್ಲರಿಂದ ಸಾಲ ಪಡೆದು ಬಡವರ ಮೇಲೆ ತೆರಿಗೆ ಹೇರಿ ಶ್ರೀಮಂತರಿಗೇ, ಅಸ್ತಿವಂತರಿಗೇ ಬಡ್ಡಿ ತೆರುವುದು ! ಹೀಗಿದೆ ಬಂಡವಾಳಶಾಹಿ - ಭೂಮಾಲಕ ಪದ್ಧತಿಯ ಸಾಮಾಜಿಕ ನ್ಯಾಯ !

— ಆರ್. ಚಂದ್ರ

(ಮುಂದುವರಿಯುವುದು)

# ವಿಜ್ಞಾನ ಮತ್ತು ತಂತ್ರಜ್ಞಾನ ಮಾನವರಿಗಾಗಿ

— ಇ. ಎಂ. ಎಸ್.

(ಜರ್ಮನ್ ಕಮ್ಯುನಿಸ್ಟ್ ಪಕ್ಷದ 11ನೇ ಅಧಿವೇಶನದಲ್ಲಿ ಸಿ.ಪಿ.ಐ (ಎಂ.) ಪಕ್ಷದ ಪ್ರಧಾನ ಕಾರ್ಯದರ್ಶಿ ನಂಬೂದರಿಪಾಡ್ ಅವರು ಮಾಡಿದ ಭಾಷಣದ ಒಂದಂಶ.)

ಮುಂದುವರಿದ ಸಮಾಜವಾದೀ ಸಮಾಜವನ್ನು ರಚಿಸುತ್ತಿರುವ ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯ ಹಾಗೂ ಬಂಡವಾಳಶಾಹೀ ನೀತಿಗಳನ್ನು ಅನುಸರಿಸುತ್ತಿರುವ ಭಾರತದ ನಡುವಿನ ಒಂದು ಪ್ರಮುಖ ವ್ಯತ್ಯಾಸದತ್ತ ಗಮನ ಸೆಳೆಯ ಬಯಸುತ್ತೇನೆ. ಈ ಎರಡೂ ದೇಶಗಳ ಮುಖಂಡರು ತಂತಮ್ಮ ದೇಶಗಳನ್ನು ವಿಜ್ಞಾನ ಹಾಗೂ ತಂತ್ರಜ್ಞಾನದ ಅತ್ಯಾಧುನಿಕ ವಿಧಾನಗಳನ್ನು ಬಳಸಿ ಆಧುನಿಕ ದೇಶಗಳನ್ನಾಗಿ ಮಾಡಿ 21ನೇ ಶತಮಾನಕ್ಕೆ ಕೊಂಡೊಯ್ಯುವ ದೃಢನಿರ್ಧಾರದ ಘೋಷಣೆ ಮಾಡಿದ್ದಾರೆ. ಆದರೆ ಹೋಲಿಕೆ ಇಲ್ಲಿಗೇ ಮುಗಿಯುತ್ತದೆ. ಸಮಾಜವಾದೀ ಜರ್ಮನಿನಲ್ಲಿ ಅತ್ಯಾಧುನಿಕ ವಿಧಾನಗಳನ್ನು ಬಳಸಿ ಮಾಡುವ ಆಧುನೀಕರಣ ಒಬ್ಬನೇ ಒಬ್ಬ ದುಡಿಮೆಗಾರನನ್ನೂ ಉದ್ಯೋಗದಿಂದ ಹೊರಗೆಸೆಯುವುದಿಲ್ಲ. ಆದರೆ ಭಾರತದ ಬೂರ್ಜ್ವಾ - ಪ್ರಜಾಪ್ರಭುತ್ವದಲ್ಲಿ ಹೆಚ್ಚೆಚ್ಚು ಜನ ಬೀದಿಗೆಸೆಯಲ್ಪಡುತ್ತಾರೆ.

ಸಮಾಜವಾದದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವರಿಗಾಗಿ ಇದ್ದರೆ,ಬಂಡವಾಳಶಾಹಿಯಲ್ಲಿ ಮಾನವರು ವಿಜ್ಞಾನ ಹಾಗೂ ತಂತ್ರಜ್ಞಾನಕ್ಕಾಗಿ.

ಅಲ್ಲದೆ ಜರ್ಮನ್ ಗಣರಾಜ್ಯದಲ್ಲಿ (ಹಾಗೂ ಇತರ ಸಮಾಜವಾದೀ) ದೇಶಗಳಲ್ಲಿ ಕೂಡಾ) ವಿಜ್ಞಾನ ಹಾಗೂ ತಂತ್ರಜ್ಞಾನದ ಮುನ್ನಡೆಯ ಆಧಾರ ಪ್ರತಿಯೊಬ್ಬ ಬಾಲಕ ಬಾಲಕಿಗೂ ಸಿಗುವ ಹತ್ತು ವರ್ಷಗಳ ಸಾಮಾನ್ಯ ಹಾಗೂ ತಾಂತ್ರಿಕ ಮಾಧ್ಯಮಿಕ ಶಿಕ್ಷಣದ ಭದ್ರ ಬುನಾದಿ. ಆದರೆ ಭಾರತದಲ್ಲಿ ರಾಜೀವ ಗಾಂಧಿಯವರ ಶಿಕ್ಷಣ ಯೋಜನೆ ಬಹು ಸಂಖ್ಯೆಯ ಬಾಲಕ, ಬಾಲಕಿಯರನ್ನು ಅನಕ್ಷರತೆಯ ನರಕಕ್ಕೆ ತಳ್ಳಿ ಒಂದು ಆರಿಸಿದ ವಿಭಾಗಕ್ಕೆ ಮಾತ್ರ ಅತ್ಯಾಧುನಿಕ ಹಾಗೂ ಮುಂದುವರಿದ ಶಿಕ್ಷಣ ನೀಡುತ್ತದೆ. ಭಾರತ ವಿಶ್ವದಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಅನಕ್ಷರಸ್ಥರನ್ನು ಪಡೆದ ದೇಶವಾಗಿ 21ನೇ ಶತಮಾನ ಪ್ರವೇಶಿಸುತ್ತದೆ.

ಆದ್ದರಿಂದ ಜರ್ಮನ್ ಗಣರಾಜ್ಯದಲ್ಲಿ ನೋಡಿದ ಅಂಶಗಳು ನಮ್ಮನ್ನು ಬಹು ಸಂಖ್ಯೆಯ ಜನತೆಯನ್ನು ನಿರುದ್ಯೋಗ, ಸಾಮಾಜಿಕ ಆರ್ಥಿಕ ದುಃಸ್ಥಿತಿ ಹಾಗೂ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಿಂದುಳಿಕೆಯತ್ತ ತಳ್ಳುವ ಇಂತಹ ಆಧುನಿಕರಣದ ವಿಧಾನಗಳ ಮೇಲೆಯೇ ಮಾನವ ಬುದ್ಧಿಮತ್ತೆ ಪೂರ್ಣವಾಗಿ ಅತು ಕೊಳ್ಳುವ ಧೋರಣೆಗಳ ವಿರುದ್ಧ ಹೋರಾಡುವ ಸ್ಫೂರ್ತಿ ನೀಡುತ್ತದೆ.

# ಇಟಲಿ ಕಮ್ಯುನಿಸ್ಟ್ ಪಕ್ಷದ ಹದಿನೇಳನೇ ಮಹಾಧಿವೇಶನ

ಬಂಡವಾಳಶಾಹೀ ದೇಶಗಳಲ್ಲಿ ಅತ್ಯಂತ ಬಲಿಷ್ಟ ಕಮ್ಯುನಿಸ್ಟ್ ಪಕ್ಷವಾದ ಇಟಲಿ ಕಮ್ಯುನಿಸ್ಟ್ ಪಕ್ಷದ ಹದಿನೇಳನೇ ಮಹಾಧಿವೇಶನ ಏಪ್ರಿಲ್ 9 ರಿಂದ 13ರ ವರೆಗೆ ಫ್ಲೋರೆನ್ಸ್‌ನಲ್ಲಿ ಜರುಗಿತು. ಇದಕ್ಕೆ ಸಿ ಪಿ ಐ (ಎಂ) ನ್ನು ಮೊತ್ತಮೊದಲ ಬಾರಿಗೆ ಆಹ್ವಾನಿಸಲಾಗಿದ್ದು, ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಸಮರ್ ಮುಖರ್ಜಿಯವರು ಸೌಹಾರ್ದ ಪ್ರತಿನಿಧಿಯಾಗಿ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು.

ಸುಮಾರು 16 ಲಕ್ಷ ಸದಸ್ಯರನ್ನು ಪ್ರತಿನಿಧಿಸಿದ 1091 ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದರು. ಇವರಲ್ಲಿ 248 ಮಹಿಳೆಯರು.

ಇಟಲಿಯ ರಾಜಕೀಯ ಜೀವನದಲ್ಲಿ ಕಮ್ಯುನಿಸ್ಟ್ ಪಕ್ಷ ಬಹಳ ಮಹತ್ವದ ಸ್ಥಾನ ಪಡೆದಿದೆ. ಸಾರ್ವತ್ರಿಕ ಚುನಾವಣೆಗಳಲ್ಲಿ ಸಾಮಾನ್ಯವಾಗಿ ಮೂರರಲ್ಲಿ ಒಂದಂಶ ಮತಗಳನ್ನು ಅದು ಪಡೆಯುತ್ತಾ ಬಂದಿದೆ. ಮೇ 1985 ರಲ್ಲಿ ನಡೆದ ಒಂದು ಅಭಿಪ್ರಾಯ ಸಂಗ್ರಹಣೆಯಲ್ಲಿ ಅದು ಶೆ.46 ಮತಗಳಿಸಿತು, ಈಗ ಸಮ್ಮಿಶ್ರ ಸರಕಾರದ ನೇತೃತ್ವ ವಹಿಸಿರುವ ಕ್ರಿಶ್ಚಿಯನ್ ಡೆಮಾಕ್ರೆಟಿಕ್ ಪಕ್ಷದ ನಂತರ ಇದು ಇಟಲಿಯ ಅತ್ಯಂತ ದೊಡ್ಡ ಪಕ್ಷ. ಇವೆರಡೂ ಪಕ್ಷಗಳಿಗಿರುವ ಮತ ಬೆಂಬಲದ ವ್ಯತ್ಯಾಸ ಕೇವಲ 2-3ಶೇ. ಎರಡನೇ ವಿಶ್ವಯುದ್ಧದಲ್ಲಿ ಫ್ಯಾಸಿಸಂ ಪತನದ ನಂತರ ಇಟಲಿಯ ಸದ್ಯದ ಸಂವಿಧಾನ ರೂಪಿಸುವುದರಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಮುಖ ಕೊಡುಗೆ ನೀಡಿತ್ತು. ಆದ್ದರಿಂದ ಈ ಅಧಿವೇಶನ ಆರಂಭವಾದ ಕೂಡಲೇ ಸಂವಿಧಾನವನ್ನು ಎತ್ತಿ ಹಿಡಿಯಬೇಕೆಂದು ಇಟಲಿಯ ಅಧ್ಯಕ್ಷ ಕೋಸಿಗಾ(ಕ್ರಿಶ್ಚಿಯನ್ ಡೆಮಾಕ್ರೆಟ್) ರವರಿಗೆ ಮನವಿ ಮಾಡಿಕೊಂಡಿತು. ಅದನ್ನು ಸ್ವೀಕರಿಸುತ್ತಾ ಅಧ್ಯಕ್ಷ ಕೋಸಿಗಾ ಆಧುನಿಕ ಇಟಲಿಯ ನಿರ್ಮಾಣದಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರವನ್ನು ಸ್ಮರಿಸಿಕೊಂಡರು.

ಮಹಾಧಿವೇಶನಕ್ಕೆ ಸಲ್ಲಿಸಿದ ಸೈದ್ಧಾಂತಿಕ ಪ್ರಸ್ತಾಪಗಳು "ಇಟಲಿ ಕಮ್ಯುನಿಸ್ಟ್ ಪಕ್ಷ ದೇಶವನ್ನು ನಡೆಸುವಲ್ಲಿ ಒಂದು ಅನಿವಾರ್ಯ ಘಟಕವಾಗುವ ತನ್ನ ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ, ತನ್ನ ಕಾರ್ಯಕ್ರಮಾತ್ಮಕ ವಿಶ್ಲೇಷಣೆ ಹಾಗೂ ಪ್ರಸ್ತಾಪಗಳಲ್ಲಿ ಹೆಚ್ಚೆಚ್ಚು ಸಿದ್ಧಗೊಂಡಿರಬೇಕಾದ" ಪ್ರಶ್ನೆಯನ್ನು ಚರ್ಚಿಸಿದ್ದರೆ ಕಾರ್ಯಕ್ರಮದ ಪ್ರಸ್ತಾಪಗಳಲ್ಲಿ ಅಂತರರಾಷ್ಟ್ರೀಯ ಸನ್ನಿವೇಶದ ಬಗ್ಗೆ ಹೇಳುತ್ತಾ ನಿಶ್ಯಸ್ತ್ರೀಕರಣ ಮತ್ತು ಆದಕ್ಕೆ ಆರಂಭದ ಹಂತವಾಗಿ ಯುರೋಪಿನಲ್ಲಿ ಮಧ್ಯಾಂತರ ಶ್ರೇಣಿಯ ಶಸ್ತ್ರಗಳ ತಡೆ ಹಾಗೂ ನಿರ್ಮೂಲನವಾಗಬೇಕೆಂದು ಒತ್ತಾಯಿಸಲಾಗಿದೆ.

"ಯುರೋಪಿಯನ್ ಸಮುದಾಯದ ಪರಧಿಯೊಳಗೆ ಒಂದು ಐಕ್ಯ, ಪ್ರಜಾಸತ್ತಾತ್ಮಕ ಹಾಗೂ ದೇಶದ ಎಲ್ಲೆಗಳನ್ನು ಮೀರಿದ ಯುರೋಪಿನ ರಚನೆಯ ಒಂದು ದೋರಣೆಯ" ಯೋಜನೆಯನ್ನೂ ಕೂಡಾ ಮಹಾಧಿವೇಶನ ಚರ್ಚಿಸಿತು.

ಪರಮಾಣು ಶಸ್ತ್ರಾಸ್ತ್ರಗಳನ್ನು ನಿರ್ಮೂಲನಗೊಳಿಸುವ ಬಗ್ಗೆ ಇಟಲಿಯನ್ ಕಮ್ಯುನಿಸ್ಟ್ ಪಕ್ಷದಲ್ಲಿ ಸಂಪೂರ್ಣ ಒಮ್ಮತವಿದೆ. ಆದರೆ ಪರಮಾಣು ಶಕ್ತಿಯ ಶಾಂತಿಯುತ ಬಳಕೆಯಲ್ಲಿ ಈ ರೀತಿಯ ಒಮ್ಮತವಿಲ್ಲ ಎನ್ನುವ ಕುತೂಹಲಕಾರೀ ಅಂಶ ಈ ಅಧಿವೇಶನದಲ್ಲಿ ತಿಳಿದು ಬಂತು. ಪರಮಾಣು ಶಕ್ತಿಯ ಶಾಂತಿಯುತ ಬಳಕೆಯಿಂದ ಸೋರುವಿಕೆಯ ಅಪಾಯ ಇನ್ನೂ ಹೆಚ್ಚುತ್ತದೆ ಎಂದು ಹಲವಾರು ವಿಜ್ಞಾನಿಗಳೂ ವಾದಿಸುತ್ತಾರೆ. ಶಾಂತಿಯುತ ಬಳಕೆಯನ್ನು ಕೂಡಾ ನಿರ್ಬಂಧಿಸಬೇಕೆಂಬ ತಿದ್ದುಪಡಿಯ ಮೇಲೆ ಅಧಿವೇಶನದಲ್ಲಿ ಮತದಾನ ನಡೆದಾಗ 457 ಪ್ರತಿನಿಧಿಗಳು ತಿದ್ದುಪಡಿಯ ವಿರುದ್ಧವಾಗಿ ಮತ ನೀಡಿದರೆ, 440 ಪ್ರತಿನಿಧಿಗಳು ಪರವಾಗಿ ಮತ ನೀಡಿದರು. ಆದ್ದರಿಂದ ಮಹಾಧಿವೇಶನದ ರಾಜಕೀಯ ಆಯೋಗ ಈ ಪ್ರಶ್ನೆಯನ್ನು ರಾಷ್ಟ್ರೀಯ ಚರ್ಚೆಗೆ ಪ್ರಸ್ತುತಪಡಿಸಬೇಕೆಂದು ಪಕ್ಷದ ಕೇಂದ್ರ ಸಮಿತಿಯ ಪರವಾಗಿ ಮಂಡಿಸಿದ ನಿರ್ಣಯವನ್ನು ಮಹಾಧಿವೇಶನ ಅಂಗೀಕರಿಸಿತು.

ಮಹಾಧಿವೇಶನ ಅಂತ್ಯದಲ್ಲಿ 219 ಸದಸ್ಯರುಳ್ಳ ಹೊಸ ಕೇಂದ್ರ ಸಮಿತಿಯನ್ನು ಆರಿಸಿತು. ಇವರಲ್ಲಿ 40 ಮಹಿಳೆಯರು ಇದ್ದಾರೆ. ಹೊಸ ಕೇಂದ್ರ ಸಮಿತಿಯಲ್ಲಿ 34 ಶೇ. ರಷ್ಟು ಮಂದಿ ಮೊದಲಬಾರಿಗೆ ಆಯ್ಕೆಯಾದವರು. ಅಲೆಸ್ಸಾಂಡ್ರೊ ನಾತ್ತಾರವರು ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು.

# ಸಾರ್ವಜನಿಕ ಕ್ಷೇತ್ರ ಉಳಿಸಿ

(ಸಿ.ಐ. ಟಿ. ಯು ನೇತೃತ್ವದಲ್ಲಿ 21-5-1986 ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ "ಸಾರ್ವಜನಿಕ ಕ್ಷೇತ್ರ ಉಳಿಸಿ" ಎಂಬ ವಿಚಾರ ಸಂಕಿರ್ಣದಲ್ಲಿ ಬಿ. ಟಿ. ರಣದಿವೆಯವರು ಮಾಡಿದ ಭಾಷಣದ ಉತ್ತರಾರ್ಧ ಮತ್ತು ನಿರ್ಣಯಗಳು.)

## ಏಕೆ ಈ ಹಲ್ಲೆಗಳು ?

ಐ ಎಂ ಎಫ್., ಜಾಗತಿಕ ಬ್ಯಾಂಕ್ ಮೊದಲಿನಿಂದಲೂ ಸಾರ್ವಜನಿಕ ವಲಯವನ್ನು ಬರ್ಖಾಸ್ತು ಮಾಡಬೇಕೆಂದು ಒತ್ತಾಯಿಸುತ್ತಾ ಬಂದಿದೆ. ಆದರೆ ಸ್ವಾತಂತ್ರ್ಯನಂತರದ ಆರಂಭದ ವರ್ಷಗಳಲ್ಲಿ ದೇಶದ ಆಳುವ ವರ್ಗಗಳು ತಮ್ಮ ಸ್ವಂತ ಹಿತಾಸಕ್ತಿಯಿಂದಲೇ ಆದರೂ ಸಾರ್ವಜನಿಕ ವಲಯದಲ್ಲಿ ಪ್ರಮುಖ ಕೈಗಾರಿಕೆಗಳನ್ನು ಸ್ಥಾಪಿಸಲೇಬೇಕಾಗಿ ಬಂದಿತ್ತು. ಇದಕ್ಕೆ ಮೊದಲು ನೆರವು ದೊರೆತದ್ದು ಸೋವಿಯೆತ್ ಒಕ್ಕೂಟ ಹಾಗೂ ಇತರ ಸಮಾಜವಾದೀ ದೇಶಗಳಿಂದ ಮಾತ್ರ, ಅಮೇರಿಕಾದಿಂದ ಇದುವರೆಗೂ ಈ ರೀತಿಯ ಯಾವ ನೆರವೂ ಬಂದಿಲ್ಲ ಎಂದು ಜ್ಞಾಪಿಸಿ ಕೊಟ್ಟ ಬಿ. ಟಿ. ಆರ್, ಇದರಿಂದಾಗಿ ಈ ನಲ್ವತ್ತು ವರ್ಷಗಳ ಕಾಲ ಹೇಗೋ ನಮ್ಮ ದೇಶಕ್ಕೆ ತನ್ನ ರಾಜಕೀಯ ಸ್ವಾತಂತ್ರ್ಯವನ್ನು, ಸ್ವತಂತ್ರ ಅಲಿಪ್ತ ವಿದೇಶಾಂಗ ನೀತಿಯನ್ನು ಅನುಸರಿಸಿಕೊಂಡು ಬರಲು ಸಾಧ್ಯವಾಯಿತು ಎಂದರು. ಆದರೆ ಸ್ವಾತಂತ್ರ್ಯನಂತರ ಹಿಡಿದ ಬಂಡವಾಳಶಾಹೀ ಮಾರ್ಗದಿಂದಾಗಿ ಈಗ ಆರ್ಥಿಕ ಬಿಕ್ಕಟ್ಟು ಯಾವ ಮಟ್ಟ ತಲುಪಿದೆಯೆಂದರೆ ಈ ಸಾಮ್ರಾಜ್ಯಶಾಹೀ ಹಣಕಾಸು ಸಂಸ್ಥೆಗಳ ಸಾಲದ ಬಲೆಯಲ್ಲಿ ದೇಶ ಸಿಲುಕಿಕೊಳ್ಳುವಂತಾಗಿದೆ. ಮುಂದಿನ ವರ್ಷದಿಂದ ಐ. ಎಂ. ಎಫ್. ಸಾಲದ ಮರುಪಾವತಿ ಆರಂಭವಾಗಬೇಕಾಗಿದ್ದು ದೇಶದ ವಿದೇಶೀ ವಿನಿಮಯದ 26% ದಷ್ಟು ಸಾಲ ಮರುಪಾವತಿಗೆ ಹೋಗುತ್ತದೆ. ಇಂತಹ ಸ್ಥಿತಿಯಲ್ಲಿ ಈ ಹಣಕಾಸು ಸಂಸ್ಥೆಗಳು ತಮ್ಮ ದೀರ್ಘಕಾಲದ ಒತ್ತಾಯವನ್ನು ಜಾರಿಗೆ ತರುವಂತೆ ಮಾಡುವ ಅವಕಾಶ ಪಡೆಯುವಂತಾಗಿದೆ. ಇದರ ಲೌಕಿಕ ಫಲವೇ ಸಾರ್ವಜನಿಕ ವಲಯದ ಉದ್ದಿಮೆಗಳ ದೂಷಣೆ ಹಾಗೂ ಯೋಜನಾ ಪ್ರಕ್ರಿಯೆಯ ಅಂತ್ಯ ಎಂದು ಬಿ.ಟಿ.ಆರ್. ನುಡಿದರು.

ದಕ್ಷತೆ, ಆಧುನೀಕರಣದ ಹೆಸರಿನಲ್ಲಿ ಮಾತ್ರವಲ್ಲದೆ ಇನ್ನೂ ಹಲವಾರು ವಿಧಾನಗಳಲ್ಲಿ ಐ.ಎಂ.ಎಫ್, ಜಾಗತಿಕ ಬ್ಯಾಂಕ್‌ಗಳ ಒತ್ತಾಯಕ್ಕೆ ಮಣಿದು ಕಾಂಟ್ರಾಕ್ಟ್ ಕೊಡುವಲ್ಲಿ ನಮ್ಮದೇ ಸಾರ್ವಜನಿಕ ಉದ್ದಿಮೆಗಳ ವಿರುದ್ಧ ಪಕ್ಷಪಾತ ನಡೆಸುವುದು, ಬಹುರಾಷ್ಟ್ರೀಯ ಸಂಸ್ಥೆಗಳ ಇನ್ನೊಂದು ರೂಪವಾದ ಅನಿವಾಸಿ ಭಾರತೀಯರ ಸಲಹಾ ಸಂಸ್ಥೆಗಳ ನೆರವಿನಿಂದ ಮಾತ್ರವೇ ಸಾರ್ವಜನಿಕ ಉದ್ದಿಮೆಗಳು ಆಧುನೀಕರಣದ ಯೋಜನೆ ತಯಾರಿಸಬೇಕೆಂದು ವಿಧಿಸಿರುವುದು, ಆಮದು ನೀತಿಯನ್ನು ಅತ್ಯಂತ ಉದಾರಗೊಳಿಸಿ ಮುಂದುವರಿದ ಬಂಡವಾಳಶಾಹೀ ದೇಶಗಳಿಗೆ ತಮ್ಮ ಸರಕುಗಳನ್ನು ಇಲ್ಲಿ ರಾಶಿಹಾಕಿ ತಮ್ಮ ಆರ್ಥಿಕ ಬಿಕ್ಕಟ್ಟನ್ನು ನಮ್ಮ ಜನಗಳ ಮೇಲೆ ದಾಟಿಸಲು ಅವಕಾಶಕೊಂದಿರುವುದು ಇತ್ಯಾದಿ ವಿಧಾನಗಳಲ್ಲಿ ಹಲ್ಲೆ ನಡೆಯುತ್ತಿರುವುದನ್ನು ರಣದಿವೆಯವರು ವಿವರಿಸಿದರು,

## ಅಲಿಪ್ತ ನೀತಿ ರಕ್ಷಣೆಗಾಗಿ

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು ಇದುವರೆಗೆ ಕೇಂದ್ರ ಸರಕಾರದ ಆರ್ಥಿಕ ನೀತಿಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಈಗ ನಮ್ಮ ಕುತ್ತಿಗೆಯ ಮೇಲೇನೆ ಬಂದಿರುವಾಗ ಪ್ರತಿಭಟಿಸುತ್ತಿದ್ದಾರೆ. ಇದು "ಒಳ್ಳೆಯ ಸಂಗತಿ" ಎಂದ ಬಿ.ಟಿ.ಆರ್. ಕೇಂದ್ರ ಸರಕಾರ ವ್ಯವಸ್ಥಿತ ರೀತಿಯಲ್ಲಿ ಜನರ ನಡುವೆ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ವಿರುದ್ಧ ಅಪಪ್ರಚಾರ ನಡೆಸುತ್ತಿರುವುದರತ್ತ ಗಮನ ಸೆಳೆದರು. ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕ ಸಂಘಗಳು ಇವೆಲ್ಲದರ ವಿರುದ್ಧ ಹೋರಾಟ ನಡೆಸಬೇಕು, ಸಾರ್ವಜನಿಕ ಉದ್ದಿಮೆಗಳ ನಿರ್ವಹಣೆಯಲ್ಲಿ ಸಮಾನ ಸ್ಥಾನಮಾನ, ಅಧಿಕಾರದೊಂದಿಗೆ ಭಾಗವಹಿಸುವ ಅವಕಾಶಕ್ಕಾಗಿ ಒತ್ತಾಯಿಸಬೇಕು, ಉದ್ದಿಮೆಗಳು ರೋಗಗ್ರಸ್ತವಾಗಿದೆಯೆಂಬ ಪ್ರಚಾರಕ್ಕೆ ಸವಾಲು ಹಾಕಿ ಅದರ ಕಾರಣಗಳನ್ನು ಜನರಿಗೆ ವಿವರಿಸಬೇಕು ಎಂದು ಕರೆ ನೀಡಿ ಈ ಹೋರಾಟದಲ್ಲಿ ಉದಾರ ಆಮದು ನೀತಿಯಿಂದಾಗಿ ಅಸಂತುಷ್ಟರಾಗಿರುವ ಸಮಾಜದ ಮೇಲ್ವರ್ಗದ ಕೆಲವು ವಿಭಾಗಗಳಿಂದಲೂ ದೇಶಪ್ರೇಮಿ ಶಕ್ತಿಗಳಿಂದಲೂ ಬೆಂಬಲ ಸಿಗುತ್ತದೆಂದು ಕಾ. ಬಿ. ಟಿ ಆರ್. ನುಡಿದರು.

ಅಧ್ಯಕ್ಷಸ್ಥಾನದಿಂದ ಮಾತನಾಡಿದ ಕಾಂ. ಸೂರ್ಯನಾರಾಯಣರಾವ್ ಕಾರ್ಮಿಕ ವರ್ಗ ತಂತಮ್ಮ ಆರ್ಥಿಕ ಬೇಡಿಕೆಗಳಲ್ಲಿ ಮಾತ್ರವಲ್ಲ ರಾಷ್ಟ್ರೀಯ ಸಮಗ್ರತೆ, ಕೋಮುಸೌಹಾರ್ದ ಹಾಗೂ ಸರಕಾರದ ಆರ್ಥಿಕ ಧೋರಣೆಯ ಬಗ್ಗೆಯೂ ಆಸಕ್ತಿ ಹೊಂದಿದೆ ಎಂಬುದನ್ನು ಈ ವಿಚಾರಗೋಷ್ಠಿ ಸೂಚಿಸುವುದಾಗಿ ಹೇಳಿ ಸರಕಾರದ ಹಲ್ಲೆಗಳನ್ನು ಎದುರಿಸಿ ಅದರ ಧೋರಣೆಗಳ ವಿರುದ್ಧ ದೇಶದ ಅಲಿಪ್ತ ನೀತಿಯ ರಕ್ಷಣೆಗಾಗಿ ಹೋರಾಡುವುದು ಅಗತ್ಯವೆಂದೂ. ಸಾರ್ವಜನಿಕ ಉದ್ದಿಮೆಗಳನ್ನು ಮುಗಿಸಿ ಬಿಡುವ ಪ್ರಯತ್ನಗಳ ವಿರುದ್ಧ ವ್ಯಾಪಕ ಜನಾಭಿಪ್ರಾಯ ಮೂಡಿಸಬೇಕೆಂದೂ ಕರೆ ನೀಡಿದರು.

ಗೋಷ್ಠಿಯಲ್ಲಿ ಹೆಚ್.ಎ.ಎಲ್ ನ ಮಹದೇವನ್, ಸಾರ್ವಜನಿಕ ಉದ್ದಿಮೆಗಳ ಆಫೀಸರುಗಳ ಪರವಾಗಿ ಕೃಷ್ಣಮೂರ್ತಿ, ಎಲ್.ಐ.ಸಿ. ಅಧಿಕಾರಿಗಳ ಪರವಾಗಿ ಸಿ. ಆರ್. ಭಟ್ ಹಾಗೂ ರಾಜಗೋಪಾಲನ್, ಬಿ.ಇ.ಎಂ.ಎಲ್ ನ ಅಶ್ವತ್ಥನಾರಾಯಣ, ವಿ.ಐ.ಎಸ್.ಎಲ್ ನ ರಂಗೇಗೌಡ, ಬಿ.ಜಿ.ಎಂ.ಎಲ್ ನ ಸವರಿದಾಸ್, ಬಿ. ಇ. ಎಲ್. ನ ವಿಭೂತಿಮಠ್, ಬ್ಯಾಂಕ್‌ಗಳ ಪರವಾಗಿ ರೇವಣ್ಣ, ವಿಮಾರಂಗದ ಪರವಾಗಿ ಮಂಜುನಾಥ್ ಹಾಗೂ ಐ ಟಿ. ಐ. ನ ಶಾಮಣ್ಣರೆಡ್ಡಿ ಮಾತನಾಡಿ ತಂತಮ್ಮ ಉದ್ದಿಮೆಗಳಲ್ಲಿನ ಪರಿಸ್ಥಿತಿ, ಸಮಸ್ಯೆಗಳ ಬಗ್ಗೆ ತಿಳಿಸಿ ಸಾರ್ವಜನಿಕ ಉದ್ದಿಮೆಗಳ ರಕ್ಷಣೆಯ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಅಂತ್ಯದಲ್ಲಿ ಸಮಿತಿಯ ಕಾರ್ಯದರ್ಶಿ ಕಾಂ. ಕೆ. ವಿ. ಶ್ರೀನಿವಾಸನ್ ಮಂಡಿಸಿದ ರಾಜೀವ್ ಸರಕಾರ ಆರ್ಥಿಕ ನೀತಿ ಹಾಗೂ ಸಾರ್ವಜನಿಕ ಉದ್ದಿಮೆಗಳ ರಕ್ಷಣೆಯ ಕುರಿತಾದ ಎರಡು ನಿರ್ಣಯಗಳನ್ನು ವಿಚಾರಗೋಷ್ಠಿ ಸರ್ವಾನುಮತದಿಂದ ಅಂಗೀಕರಿಸಿತು.

ಅಂತ್ಯದಲ್ಲಿ ಎರಡು ನಿರ್ಣಯಗಳನ್ನು ಅವಿರೋಧವಾಗಿ ಅಂಗೀಕರಿಸಲಾಯಿತು. ಮೊದಲನೆಯ ನಿರ್ಣಯದ ಮೂಲಕ ರಾಜೀವ ಗಾಂಧಿಯವರ ಹೊಸ ಆರ್ಥಿಕ ನೀತಿ ದೇಶವನ್ನು ಆರ್ಥಿಕ ಪರಾವಲಂಬನೆಯತ್ತ; ಸಾಲದ ಬಲೆಯತ್ತ ಕೊಂಡೊಯ್ಯುವುದರ, ಅಲಿಪ್ತ ನೀತಿಗೆ ಧಕ್ಕೆ ತರುವುದರ ಬಗ್ಗೆ ತನ್ನ ಆತಂಕ ವ್ಯಕ್ತಪಡಿಸಿ ಸಾರ್ವಜನಿಕ ವಲಯಕ್ಕೆ ಮತ್ತೆ ಉನ್ನತ ಸ್ಥಾನ ನೀಡಬೇಕೆಂದು ಸರಕಾರವನ್ನು ವಿಚಾರಗೋಷ್ಠಿ ಒತ್ತಾಯಿಸಿತು. ಸಾರ್ವಜನಿಕ ವಲಯವನ್ನು ರಕ್ಷಿಸಲು ಹೋರಾಟ ನಡೆಸಲು ನಿರ್ಧರಿಸಿ ಹೊಸ ಆರ್ಥಿಕ ನೀತಿಯ ವಿರುದ್ಧ ನಿರಂತರ ಹೋರಾಟ ನಡೆಸಲು ಕಾರ್ಮಿಕ ಸಂಘಗಳಿಗೆ ದೇಶಪ್ರೇಮಿ ಜನತೆಗೆ ಕರೆ ನೀಡಿತು.

ಇನ್ನೊಂದು ನಿರ್ಣಯದ ಮೂಲಕ ಐ ಟಿ.ಐ, ನಲ್ಲಿ ಇ. ಎಸ್. ಎಸ್. ಘಟಕ ಸ್ಥಾಪಿಸಬೇಕೆಂದು ಬಿ.ಜಿ.ಎಂ.ಎಲ್. ನಷ್ಟ ಅನುಭವಿಸಲು ಕಾರಣವಾದ ತಪ್ಪು ನೀತಿಗಳನ್ನು ಸರಿಪಡಿಸಿಕೊಳ್ಳಬೇಕೆಂದು, ವಿ.ಐ.ಎಸ್.ಎಲ್. ನ್ನು ಸ್ಟೀಲ್ ಅಥಾರಿಟಿ ವಹಿಸಿಕೊಳ್ಳಬೇಕೆಂದು, ಪೈಪ್‌ಲೈನ್ ಕಾಂಟ್ರಾಕ್ಟನ್ನು ಬಿ-ಹೆಚ್.ಇ.ಎಲ್. ಗೇ ನೀಡಬೇಕೆಂದು ಹಾಗೂ ಸಾರ್ವಜನಿಕ ಉದ್ದಿಮೆಗಳ ಆಡಳಿತದಲ್ಲಿ ಕಾರ್ಮಿಕರ ಪ್ರತಿನಿಧಿಗಳಿಗೆ ಸಮಾನ ಸ್ಥಾನಮಾನ ಹಾಗೂ ಅಧಿಕಾರಗಳೊಂದಿಗೆ ಭಾಗವಹಿಸಲು ಅವಕಾಶ ನೀಡಬೇಕೆಂದು ವಿಚಾರಗೋಷ್ಠಿ ಒತ್ತಾಯಿಸಿತು.

# ನನಗೆ ರಕ್ಷಣೆ ನೀಡಿ

ನಾನು ವಿರುಪಾಕ್ಷಗೌಡ ಸ.ಹಿ.ಪ್ರಾ. ಶಾಲೆ, ಯಲಬುರ್ಗಾ (ಕುದುರೆಮೋತಿ ಪ್ರಕರಣದಲ್ಲಿ ನೊಂದ ಶಿಕ್ಷಕ) ತಮ್ಮಲ್ಲಿ ವಿನಂತಿಸಿಕೊಳ್ಳುವದೇನೆಂದರೆ ನನ್ನ ರಕ್ಷಣೆಗಾಗಿ ನನ್ನನ್ನು ಯಲಬುರ್ಗಾದಲ್ಲಿ ಎರವಲು ಆಧಾರದ ಮೇಲೆ ಮುಂದುವರಿಸಲು ವಿನಂತಿಸಿಕೊಳ್ಳುವೆ. ಇಲ್ಲಿಯ ಸಹಾಯಕ ಶಿಕ್ಷಣಾಧಿಕಾರಿಗಳು ಯಲಬುರ್ಗಾ ಅವರ ಒತ್ತಡದಿಂದಲೂ ನನ್ನನ್ನು ಇಲ್ಲಿಂದ ಬೇರೆ ಕಡೆಗೆ ವರ್ಗಾಯಿಸಲು, ನನಗೆ ಬಹಳ ಕಿರುಕುಳ ಕೊಡಹತ್ತಿದ್ದಾರೆ. ಅಲ್ಲದೆ ಯಲಬರ್ಗಾ ತಾಲೂಕ ಶಾಸಕರಾದ ಶ್ರೀ ಬಸವರಾಜ ರಾಯರೆಡ್ಡಿಯವರದು ಬಹಳ ಒತ್ತಾಯವಿದೆ ಇದರಿಂದ ಮೊದಲೇ ಮಾನಸಿಕ ವೇದನೆಯಿಂದ ಜಿರ್ಝರಿತನಾದ ನನಗೆ ಹಾಗೂ ನನ್ನ ಕುಟುಂಬಕ್ಕೆ ಇವರು ಮತ್ತಿಷ್ಟು ಮಾನಸಿಕ ವೇದನೆಯುಂಟು ಮಾಡುತ್ತಿದ್ದಾರೆ.

ಶ್ರೀಮಾನ್ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ವಿಭಾಗ ಇವರು ಎರವಲು ಮುಂದುವರಿಯುವಂತೆ ಆದೇಶವಿತ್ತಿದ್ದರೂ ಸಹ ಅದನ್ನು ಲಕ್ಷಕ್ಕೆ ತಾರದೆ, ಈ ರೀತಿ ಮಾಡುತ್ತಿರುವುದನ್ನು ನೋಡಿದರೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಾರಣ ಮಾನ್ಯ ಶಿಕ್ಷಣ ಮಂತ್ರಿಗಳು ನನ್ನ ಈ ಮನವಿಯನ್ನು ಎರವಲು ಮುಂದುವರಿಯುವಂತೆ ಮತ್ತು ಸರಿಯಾದ ರಕ್ಷಣೆ ಒದಗಿಸುವಂತೆ ಆದೇಶವೀಯಬೇಕೆಂದು ಬೇಡಿಕೊಳ್ಳುವೆ. (ಕುದುರೆಮೋತಿ ಪ್ರಕರಣದಲ್ಲಿ ವಿರೂಪಾಕ್ಷಗೌಡರ ಪತ್ನಿ ಪಾರ್ವತಮ್ಮನಿಗೆ ಅಪಾರ ಚಿತ್ರಹಿಂಸೆಯಾಗಿತ್ತು. ವಿರೂಪಾಕ್ಷಗೌಡರನ್ನು ಮಾನಸಿಕ ತೊಂದರೆಗೊಳಪಡಿಸಲಾಗಿತ್ತು. ಸರಕಾರ ಕುದುರೆಮೋತಿ ಮಠದ ಸ್ವಾಮಿ, ಅವರ ಬೆಂಬಲಿಗರು ಮತ್ತು ಅಲ್ಲಿಯ ಶಾಸಕರ ಮೇಲೆ ಯೋಗ್ಯಕ್ರಮ ಕೈಗೊಳ್ಳದೆ ಶಿಕ್ಷಕರಾದ ವಿರೂಪಾಕ್ಷಗೌಡರಿಗೆ ಕಿರುಕುಳ ಕೊಡುವುದನ್ನು ಸಿ ಪಿ ಐ (ಎಂ) ಖಂಡಿಸುತ್ತದೆ. ಎಲ್ಲಾ ಸಾಮೂಹಿಕ ಸಂಘಟನೆಗಳು ವಿರೂಪಾಕ್ಷಗೌಡರನ್ನು ಯಲಬುರ್ಗಿಯಲ್ಲೇ ಉಳಿಸಬೇಕೆಂದು ಮನವಿ ಪತ್ರ ಸಲ್ಲಿಸಬೇಕೆಂದೂ ಕೇಳಿಕೊಳ್ಳುತ್ತೇವೆ. –(ಸಂಪಾದಕಮಂಡಳಿ)

○○○

## ಮೇ ದಿನದ ಶತಮಾನೋತ್ಸವ ಆಚರಣೆ

### ಕುಪ್ಪೆಪದವು

ಮೇ ದಿನದ ಶತಮಾನೋತ್ಸವದ ಅಂಗವಾಗಿ ತಾರೀಕು 24-5-86 ರಂದು ಕುಪ್ಪೆ ಪದವಿನಲ್ಲಿ ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘ ಮತ್ತು ಕುಪ್ಪಪದವು ಪ್ರದೇಶ ರೈತ ಸಂಘದ ವತಿಯಿಂದ ಸಾರ್ವಜನಿಕ ಸಭೆಯು ನೀಲಯ್ಯ ನಾಯ್ಕ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಮಂಗಳೂರು ತಾಲೂಕು ರೈತ ಮುಂದಾಳು ಜನಾರ್ಧನ ನಾಯ್ಕ, ದ. ಕ. ಜಿಲ್ಲಾ ಸಿ. ಐ. ಟಿ. ಯು. ಉಪಾಧ್ಯಕ್ಷ ಜಿ. ಮಾಧವ ಹಾಗೂ ದ. ಕ. ಜಿಲ್ಲಾ ಬೀಡಿ ಫೆಡರೇಷನ್ ಕಾರ್ಯದರ್ಶಿ ಯು ಬಿ ಲೋಕಯ್ಯನವರು ಮೇದಿನದ ಶತಮಾನೋತ್ಸವದ ಮಹತ್ವದ ಬಗ್ಗೆ ಮಾತನಾಡಿದರು.

ಪ್ರಾರಂಭದಲ್ಲಿ ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ವಾಸುದೇವ ಆಚಾರ್ಯರವರು ಸ್ವಾಗತಿಸಿದರು. ಕೊನೆಯಲ್ಲಿ ವಸಂತ ಆಚಾರ್ಯರವರು ಧನ್ಯವಾಧವನ್ನರ್ಪಿಸಿದರು.

### ಸುರತಕಲ್

ಮೇ ಶತಮಾನೋತ್ಸವದ ಅಂಗವಾಗಿ ಗುರುಪುರ ಸುರತ್ಕಲ್ ಪ್ರದೇಶ ಬೀಡಿ ಲೇಬರ್ ಯೂನಿಯನ್ ಮತ್ತು ಗುರುಪುರ ಸರ್ಕಾ ರೈತ ಸಂಘದ ಆಶ್ರಯದಲ್ಲಿ 18-5-85 ರಂದು ಮಳಲಿ ಪೇಟೆಯಲ್ಲಿ ಎಂ. ಎಸ್. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಸಲಾಯ್ತು. ಸಭೆಗೆ ಮುಂಚಿತವಾಗಿ ಮಳಲಿ ಚೆನ್ನರ ಪಾದೆಯಿಂದ ರೈತ ಕಾರ್ಮಿಕರ ಬೃಹತ್ ಮೆರವಣಿಗೆ ಏರ್ಪಡಿಸಲಾಗಿತ್ತು. ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಮತ್ತು ಬೀಡಿ ಕಾರ್ಮಿಕ ಫೆಡರೇಷನ್ ಜಿಲ್ಲಾ ಕಾರ್ಯದರ್ಶಿ ಯು. ಬಿ. ಲೋಕಯ್ಯ ಮೇ ಶತಮಾನೋತ್ಸವದ ಚಾರಿತ್ರಿಕ ಹೋರಾಟದ ಪರಂಪರೆಯನ್ನು ವಿವರಿಸಿದರು. ಹರಿಶ್ಚಂದ್ರ ಧನ್ಯವಾದವಿತ್ತರು. ಎಂ. ಹೊನ್ನಯ್ಯನವರು ಸ್ವಾಗತಿಸಿದರು.

○

# ಚೆರ್ನೋಬಿಲ್ ಅಪಘಾತ ಮತ್ತು ಸಾಮ್ರಾಜ್ಯಶಾಹೀ ಅಪಪ್ರಚಾರ

ಸೋವಿಯೆತ್ ಒಕ್ಕೂಟ ಮತ್ತು ಇತರ ಸಮಾಜವಾದೀ ದೇಶಗಳು ಒಂದಾದಮೇಲೊಂದರಂತೆ ನೀಡುತ್ತಿರುವ ಶಾಂತಿ ಆಹ್ವಾನಗಳನ್ನು ಧಿಕ್ಕರಿಸುತ್ತಾ ಭೂಮ್ಯಾಕಾಶದಲ್ಲೆಲ್ಲಾ ಪರಮಾಣು ಯುದ್ಧ ಆರಂಭಿಸುವ ತಮ್ಮ ತರಾತುರಿಯ ಸಿದ್ಧತೆಯಿಂದಾಗಿ ಮತ್ತು ಇತ್ತೀಚೆಗೆ ಲಿಬ್ಯಾದ ವಿರುದ್ಧ ತಮ್ಮ ದುರಾಕ್ರಮಣದಿಂದಾಗಿ ಸಿಟ್ಟಿಗೆದ್ದಿರುವ ವಿಶ್ವದ ಶಾಂತಿಪ್ರಿಯ ಜನಗಳ ಆಕ್ರೋಶ ಹಾಗೂ ಪ್ರತಿಭಟನೆಗಳ ಮಹಾಪೂರದಲ್ಲಿ ಮುಳುಗಿಹೋಗುತ್ತಿರುವ ಸಾಮ್ರಾಜ್ಯಶಾಹಿ ಯುದ್ಧಕೋರರಿಗೆ ಸೋವಿಯತ್ ಒಕ್ಕೂಟದ ಉಕ್ರೇನಿಯನ್ ಗಣರಾಜ್ಯದ ಚೆರ್ನೋಬಿಲ್ ಅಣುವಿದ್ಯುತ್ ಸ್ಥಾವರದ ಒಂದು ಘಟಕದಲ್ಲಿ ಏಪ್ರಿಲ್ 27 ರಂದು ನಡೆದ ಒಂದು ಅತ್ಯಂತ ಅನಿರೀಕ್ಷಿತ ಅಪಘಾತದಿಂದಾಗಿ ಒಂದು ಹುಲ್ಲುಕಡ್ಡಿ ದೊರೆತಂತಾಗಿದೆ. ವಿಶ್ವದ ಶಾಂತಿಪ್ರಿಯ ಜನತೆಯ ಗಮನವನ್ನು ಬೇರೆಡೆಗೆ ಸೆಳೆಯಲು ಅಮೆರಿಕಾ ಹಾಗೂ ಪಶ್ಚಿಮ ಯುರೋಪಿನ ಸುದ್ದಿ ಮಾಧ್ಯಮಗಳು ಚೆರ್ನೋಬಿಲ್ ಅಪಘಾತದ ಬಗ್ಗೆ ಸಾವಿರಾರು ಸುಳ್ಳು ವದಂತಿಗಳನ್ನು, ತಪ್ಪು ಮಾಹಿತಿಗಳನ್ನು, ಊಹಾಪೋಹಗಳನ್ನು ಹರಡುತ್ತಾ ಹಾಹಾಕಾರ ಎಬ್ಬಿಸಲು ಪ್ರಯತ್ನಿಸುತ್ತಾ ತಮ್ಮ ನೀಚತನವನ್ನು, ಅನೈತಿಕತೆಯನ್ನು ಪ್ರದರ್ಶಿಸುತ್ತಿವೆ. 1971 ರಿಂದ 1984 ರ ನಡುವೆ ವಿಶ್ವದ 14 ದೇಶಗಳ ಅಣುವಿದ್ಯುತ್ ಸ್ಥಾವರಗಳಲ್ಲಿ ಒಟ್ಟು 152 ಅಪಘಾತಗಳಾಗಿವೆ. 1957 ರಲ್ಲಿ ಬ್ರಿಟನ್ನಿನ ಸೆಲ್ಲಾಫೀಲ್ಡ್‌ನಲ್ಲಿ ನಡೆದ ಇಂತಹ ಒಂದು ಅಪಘಾತದ ಪರಿಣಾಮವಾಗಿ 250 ಮಂದಿ ಸತ್ತಿದ್ದಾರೆಂದು ಬ್ರಿಟಿಶ್ ಸರಕಾರ ಇತ್ತೀಚೆಗಷ್ಟೇ ಒಪ್ಪಿಕೊಂಡಿದೆ. 1979 ರಲ್ಲಿ ಅಮೆರಿಕಾದ ತ್ರೀಮೈಲ್ಸ್ ಐಲೆಂಡ್‌ನಲ್ಲಿ ನಡೆದ ಅಪಘಾತದ ದುಷ್ಪರಿಣಾಮವನ್ನು ಪೂರ್ಣವಾಗಿ ಅಂದಾಜು ಮಾಡುವುದು ಅಮೆರಿಕನ್ ಸರಕಾರಕ್ಕೆ ಇನ್ನೂ ಆಗಿಲ್ಲ. ಈ ಯಾವ ಸಂದರ್ಭದಲ್ಲೂ ಸಾಮ್ರಾಜ್ಯಶಾಹೀ ಪತ್ರಿಕೆಗಳು ರೇಡಿಯೋಗಳು, ಟೆಲಿವಿಷನ್‌ಗಳು ಈ ರೀತಿಯ ಹಾಹಾಕಾರ ಎಬ್ಬಿಸಿರಲಿಲ್ಲ ಎಂಬುದು ಗಮನಾರ್ಹ.

## ಅಪಪ್ರಚಾರ ಬಯಲಾಯಿತು

ಅಪಘಾತದಲ್ಲಿ ಸಾವಿರಾರು ಜನ ಸತ್ತಿದ್ದಾರೆ, ಜನಗಳೆಲ್ಲಾ ಕಕ್ಕಾಬಿಕ್ಕಿಯಾಗಿದ್ದಾರೆ, ಸಾವಿರಾರು ಜನ ಊರು ಬಿಡುತ್ತಿದ್ದಾರೆ. ಅಪಘಾತದ ದುಷ್ಪರಿಣಾಮಗಳನ್ನು ಎದುರಿಸುವ ಸಾಮರ್ಥ್ಯ ಸೋವಿಯತ್ ಒಕ್ಕೂಟಕ್ಕಿಲ್ಲ, ಬೇಕೆಂದೇ ಅಪಘಾತದ ಸುದ್ದಿಯನ್ನು ತಡವಾಗಿ ನೀಡಲಾಗಿದೆ ಎಂಬುದೆಲ್ಲಾ ಎಂತಹ ಕೀಳುಮಟ್ಟದ ದುರುದ್ದೇಶಪೂರ್ಣ ಅಪಪ್ರಚಾರಗಳು ಎನ್ನುವುದು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಜಗದ್ವಿಖ್ಯಾತ ಅಸ್ಥಿಮಜ್ಜೆ ಜೋಡಣೆ ತಜ್ಞ ಪ್ರೊಫೆಸರ್ ರಾಬರ್ಟ್ ಗಾಲೆ ಹಾಗೂ ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆನ್ಸಿ(IAEA)ಯ ಮಹಾ ನಿರ್ದೇಶಕ ಹಾನ್ಸ್‌ಬಿಕ್ಸ್ ಸೋವಿಯತ್ ಒಕ್ಕೂಟದ ಸರಕಾರದ ಆಹ್ವಾನದ ಮೇಲೆ ಅಪಘಾತದ ಸ್ಥಳಕ್ಕೆ ಭೇಟಿ ನೀಡಿ ಬಂದ ಮೇಲೆ ಇತ್ತ ಪತ್ರಿಕಾ ಹೇಳಿಕೆಗಳಿಂದ ಸ್ಪಷ್ಟಗೊಂಡಿದೆ.

ಅಪಘಾತದ ಬಗ್ಗೆ, ಅದರ ದುಷ್ಪರಿಣಾಮಗಳನ್ನು ಎದುರಿಸಲು ಕೈಗೊಂಡ ಕ್ರಮಗಳ ಬಗ್ಗೆ ಅಂತರ್ರಾಷ್ಟ್ರೀಯ ಸಂಸ್ಥೆಗೆ ದಿನನಿತ್ಯ ನಿಯಮಗಳ ಪ್ರಕಾರ ಸೋವಿಯೆಟ್ ಒಕ್ಕೂಟ ಪೂರ್ಣ ಮಾಹಿತಿ ನೀಡುತ್ತಿದೆ ಎಂದ ಡಾ. ಬಿಕ್ಸ್‌ರವರು ಈ ಬಗ್ಗೆ ಅಮೆರಿಕಾ ಮತ್ತು ಪಶ್ಚಿಮ ಯುರೋಪಿನ ಸಮೂಹ ಮಾಧ್ಯಮಗಳು ಉತ್ಪ್ರೇಕ್ಷೆಯ ಪ್ರಚಾರ ಮಾಡಿ, ತಪ್ಪು ಮಾಹಿತಿಗಳನ್ನು ನೀಡಿ ಜನಗಳಲ್ಲಿ ಅನಗತ್ಯ ಕಳವಳ ಮೂಡಿಸಿವೆ ಎಂದು ಟೀಕಿಸಿದ್ದಾರೆ. 1979 ರಲ್ಲಿ ಅಮೆರಿಕಾದ ತ್ರೀಮೈಲ್ಸ್ ಐಲೆಂಡ್‌ನ ಅಣುಶಕ್ತಿ ಅಪಘಾತದ ಸರಿಯಾದ ಕಾರಣ ತಿಳಿಯಲು ಆಗಿನ ಅಮೆರಿಕನ್ ಸರಕಾರಕ್ಕೂ ತಕ್ಷಣ ಸಾಧ್ಯವಾಗಲಿಲ್ಲ. ಅಮೆರಿಕನ್ ಸೆನೆಟ್‌ಗೆ ಕೂಡಾ ಆದ ಅಪಘಾತದ ಬಗ್ಗೆ ಸರಕಾರ ತಿಳಿಸಿದ್ದು 10 ದಿನಗಳ ನಂತರ. ಅಂತರ್ರಾಷ್ಟ್ರೀಯ ಅಣುಶಕ್ತಿ ಏಜೆಂಸಿಗಂತೂ ಅಪಘಾತ ನಡೆದ ಎಂಟು ವಾರಗಳ ನಂತರವಷ್ಟೇ ತಿಳಿಸಲಾಗಿತ್ತು. ಸೋವಿಯೆತ್ ಸರಕಾರ ಸುದ್ದಿ ತಿಳಿಸುವಲ್ಲಿ ಬೇಕೆಂದೆ ವಿಳಂಬ ಮಾಡಿದೆಯೆಂದು ಗುಲ್ಲೆಬ್ಬಿಸುತ್ತಿರುವವರಿಗೆ ಈ ಸಂಗತಿ ಮರೆತುಹೋಗಿದೆಯೆಂದೇನೂ ಅಲ್ಲ. ಆದರೆ ಅದರ ಉದ್ದೇಶ ಸಾಧನೆಗಿದು ಪೂರಕವಲ್ಲ ಅಷ್ಟೆ.

ಬದಲಿ ಅಸ್ಥಿಮಜ್ಜೆ ಜೋಡಣೆಯ ಅಂತರ್ರಾಷ್ಟ್ರೀಯ ಸಲಹಾ ಸಮಿತಿಯ ಮುಖ್ಯಸ್ಥರಾದ ಪ್ರೊಫೆಸರ್ ರಾಬರ್ಟ್ ಗಾಲೆ ಸೋವಿಯೆತ್ ಒಕ್ಕೂಟದ ತಮ್ಮ ಭೇಟಿಯಿಂದ ಹಿಂತಿರುಗಿದ ನಂತರ ಪತ್ರಿಕಾ ಗೋಷ್ಠಿಯೊಂದರಲ್ಲಿ ಮಾತನಾಡುತ್ತಾ ಅಪಘಾತದಲ್ಲಿ ಗಂಭೀರ ಸ್ವರೂಪದಲ್ಲಿ ಗಾಯಗೊಂಡ ಜನಗಳಿಗೆ ವೈದ್ಯಕೀಯ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಸೋವಿಯೆತ್ ವೈದ್ಯಕೀಯ ತಜ್ಞರು ಪ್ರಶಂಸಾರ್ಹ ಸಾಧನೆ ಪ್ರದರ್ಶಿದ್ದಾರೆ ಎಂದು ಹೇಳಿದ್ದಾರೆ. ಈ ಅಪಘಾತದಂತಹ ಅನಿರೀಕ್ಷಿತ ಗಂಭೀರ ಪರಿಸ್ಥಿತಿಯಲ್ಲಿ ತುರ್ತು ಚಿಕಿತ್ಸೆ ಒದಗಿಸಲು ಸೋವಿಯತ್ ವೈದ್ಯಕೀಯ ತಜ್ಞರು ಅಸಾಧಾರಣ ಅನುಭವ ಪಡೆದಿದ್ದಾರೆ. ಮತ್ತು ವಿಕಿರಣದಿಂದ ಆದ ಹಾನಿಯ ಪ್ರಮಾಣವನ್ನು ಆರಂಭದ ಘಟ್ಟದಲ್ಲೇ ಅವರು ಸಮರ್ಪಕವಾಗಿ ಅಂದಾಜು ಮಾಡಿ ಚಿಕಿತ್ಸೆ ಒದಗಿಸಲು ಸಮರ್ಪಕ ಔಷಧಿಗಳನ್ನು ಆರಿಸಿಕೊಂಡಿದ್ದಾರೆ ಎಂದು ಮುಂದುವರಿದು ಪ್ರೊಫೆಸರ್ ಗಾಲೆ ನುಡಿದಿದ್ದಾರೆ.

## ಉಚ್ಚಮಟ್ಟದ ಪ್ರತೀಕ

ಈ ಅಪಘಾತದಲ್ಲಿ ಮೂವರು ಮರಣ ಹೊಂದಿದ್ದು 289 ಮಂದಿಯ ಮೇಲೆ ತೀವ್ರ ವಿಕಿರಣ ಪ್ರಭಾವವುಂಟಾಗಿದೆ. ಇವರನ್ನೆಲ್ಲಾ ಏಪ್ರಿಲ್ 27 ರ ರಾತ್ರಿಯೇ ಮಾಸ್ಕೋದ ವಿಶೇಷ ಆಸ್ಪತ್ರೆಗೆ ಸಾಗಿಸಿ ತಜ್ಞರಿಂದ ಚಿಕಿತ್ಸೆ ನೀಡಲಾಗುತ್ತಿದೆ. ಗಂಭೀರ ಸ್ಥಿತಿಯಲ್ಲಿದ್ದ 19 ಜನರಿಗೆ ತಕ್ಷಣ ಬದಲಿ ಅಸ್ಥಿಮಜ್ಜೆ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ.

ಅಪಘಾತ ನಡೆದ ಪ್ರದೇಶದ ಸುತ್ತಮುತ್ತಲಲ್ಲಿ ವಿಕಿರಣದ ಪ್ರಮಾಣವನ್ನು ಕಡಿಮೆ ಮಾಡಲು ನಡೆಸಿದ ಸತತ ಪ್ರಯತ್ನಗಳ ಪರಿಣಾಮವಾಗಿ ಪರಿಸ್ಥಿತಿ ಬಹಳಷ್ಟು ಸುಧಾರಿಸಿದೆ. ಹತ್ತಿರದ ಪ್ರಿಪ್ಯಾತ್ ನದಿಯ ದಡಗಳುದ್ದಕ್ಕೂ ಏರಿಯನ್ನು ಕಟ್ಟಿ ನದಿಯ ನೀರು ದೂಷಿತಗೊಳ್ಳದಂತೆ ತಕ್ಷಣ ಕ್ರಮಕೈಗೊಳ್ಳಲಾಗಿದೆ. ಈ ಪ್ರದೇಶದ ನಿವಾಸಿಗಳನ್ನೂ 1100 ಬಸ್ಸುಗಳಲ್ಲಿ ಸುಸಂಘಟಿತ ರೀತಿಯಲ್ಲಿ ಕೀವ್ ಪ್ರದೇಶದ ಪೊಲೆಸ್ಕೆ ಹಾಗೂ ಐವಾಂಕೊವ್ ಜಿಲ್ಲೆಗಳಿಗೆ ವರ್ಗಾಯಿಸಿ ಅವರಿಗೆ ಅಲ್ಲಿ ಸಕಲ ಸೌಕರ್ಯಗಳನ್ನು ಒದಗಿಸಲಾಗಿದೆ. ಮಕ್ಕಳ ಬಗ್ಗೆ ವಿಶೇಷ ಗಮನ ಹರಿಸಲಾಗುತ್ತಿದೆ. ತಮ್ಮ ಹೊಸ ವಾಸಸ್ಥಳಗಳಿಗೆ ಬಂದ ಮರುದಿನವೇ ಮಕ್ಕಳು ನಿರಾತಂಕವಾಗಿ ಎಂದಿನಂತೆ ಶಾಲೆಗೆ ಹೋಗುತ್ತಿದ್ದಾರೆ. ಸೋವಿಯೆತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋದ ಉಸ್ತುವಾರಿಯಲ್ಲಿ ಉಕ್ರೇನಿಯನ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ, ಕೀವ್ ಪ್ರಾದೇಶಿಕ ಸಮಿತಿ, ಲೆನಿನ್‌ವಾದಿ ಯುವ ಕಮ್ಯುನಿಸ್ಟ್ ಲೀಗ್‌ನ ಜಿಲ್ಲಾ ಸಮಿತಿ ಹಾಗೂ ಸೋವಿಯೆತ್ ಒಕ್ಕೂಟ ಸರಕಾರ ನೇಮಿಸಿದ ಆಯೋಗ ಜತೆಸೇರಿ ವರ್ಗಾಯಿಸಲ್ಪಟ್ಟ ಜನತೆಗೆ ಯಾವ ತೊಂದರೆಯೂ ಆಗದಂತೆ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುತ್ತಿವೆ.

ಚೆರ್ನೋಬಿಲ್ ಅಪಘಾತದಿಂದಾಗಿ ಒಂದೆಡೆ ಸಾಮ್ರಾಜ್ಯಶಾಹಿಗಳ ಕೀಳು ನೈತಿಕ ಮಟ್ಟ ಬಯಲಿಗೆ ಬಂದಿದ್ದರೆ, ಇನ್ನೊಂದೆಡೆ ಈ ಅಪಘಾತಕ್ಕೆ ಸಂಬಂಧ ವಿವಿಧ ಬೆಳವಣಿಗೆಗಳು, ಅದರ ದುಷ್ಪರಿಣಾಮಗಳನ್ನು ನಿವಾರಿಸಲು ಕೈಗೊಂಡ ಕ್ರಮಗಳು ಸೋವಿಯೆತ್ ಪ್ರಭುತ್ವ ಹಾಗೂ ಸೋವಿಯೆತ್ ರಾಜಕೀಯ ವ್ಯವಸ್ಥೆಯ ಜವಾಬ್ದಾರಿಯ ಭಾವನೆಯ – ಸೋವಿಯೆತ್ ಹಾಗೂ ವಿದೇಶೀ ನಾಗರಿಕರ ಜೀವ ಹಾಗೂ ಆರೋಗ್ಯದ ಬಗ್ಗೆ ಜವಾಬ್ದಾರಿಯ ಭಾವನೆಯ—ಉಚ್ಚಮಟ್ಟವನ್ನು ಸ್ಪಷ್ಟವಾಗಿ ತೋರಿಸಿ ಕೊಟ್ಟಿದೆ.

## ವಿಫಲತೆಗಳಿಂದಲೂ ಪಾಠ

ಚೆರ್ನೋಬಿಲ್ ಅಣುಸ್ಥಾವರ ಅಂತರ್ರಾಷ್ಟ್ರೀಯ ಹಾಗೂ ಸೋವಿಯೆತ್ ಗುಣಮಟ್ಟಕ್ಕೆ ಅನುಗುಣವಾಗಿ ರಚಿತವಾಗಿದ್ದು ಕೆಲವು ಅತ್ಯಂತ ಅಸಂಭವನೀಯ ಕಾರಣಗಳಿಂದ ಉಂಟಾಗಿರಬಹುದಾದ ರಾಸಾಯನಿಕ ಸ್ಫೋಟದಿಂದಾಗಿ ಅಪಘಾತ ನಡೆದಿರಬಹುದು ಎಂದು ಊಹಿಸಲಾಗಿದೆ. ಸೋವಿಯೆತ್ ಒಕ್ಕೂಟದ ಉಪವಿದೇಶಾಂಗ ಮಂತ್ರಿ ಅನಾತೊಲಿ ಕೊವಾಲ್ಯೊವ್ ಹೇಳಿರುವಂತೆ "ಚೆರ್ನೋಬಿಲ್‌ನ ಘಟನೆ ನಿಜವಾಗಿಯೂ ದುರದೃಷ್ಟಕರ. ಆದರೆ ಸಾಧನೆಗಳಿಂದ ಮಾತ್ರವೇ ಅಲ್ಲ, ವಿಫಲತೆಗಳಿಂದಲೂ ಪಾಠ ಕಲಿಯಬಹುದು" ಹೀಗೆ ಮಾನವಕುಲ ಕಲಿಯಲೇಬೇಕಾದ ಮುಖ್ಯ ಪಾಠಗಳು ಎರಡು. ಮೊದಲನೆಯದಾಗಿ, ಒಂದು ಸುನಿಯಂತ್ರಿತ ಸ್ಥಾವರದಲ್ಲಿನ ಅಣುಶಕ್ತಿಯಿಂದ ಇಷ್ಟೊಂದು ತೊಂದರೆಯಾಗಲು ಸಾಧ್ಯವಿರುವಾಗ, ಅನಿಯಂತ್ರಿತ ಹಾಗೂ ವಿನಾಶಕ್ಕಾಯೇ ತಯಾರಿಸುವ ಪರಮಾಣು ಅಸ್ತ್ರಗಳ ವಿನಾಶ ನೀತಿ ಊಹೆಗೂ ಮೀರಿದ್ದು. ಆದ್ದರಿಂದ ಪರಮಾಣು ಅಸ್ತ್ರಗಳನ್ನು ಈ ಶತಮಾನದ ಅಂತ್ಯದ ವೇಳೆಗೆ ಪೂರ್ಣವಾಗಿ ನಿರ್ನಾಮ ಮಾಡಲು ಸೋವಿಯತ್ ಒಕ್ಕೂಟ ಮುಂದಿರುವ ಪ್ರಸ್ತಾಪ ಮಾನವ ಕುಲಕ್ಕೆ ಎಷ್ಟೊಂದು ಮಹತ್ವದ್ದು ಎನ್ನುವುದು ಇನ್ನಷ್ಟು ಮನದಟ್ಟಾಗುವುದು.

ಎರಡನೆಯದಾಗಿ, ಪರಮಾಣು ಶಕ್ತಿಯ ಶಾಂತಿಯುತ ಬಳಕೆಯಲ್ಲಿ ಎಷ್ಟೊಂದು ಜಾಗರೂಕತೆ ವಹಿಸಬೇಕು ಇದಕ್ಕಾಗಿ ಅಂತರ್ರಾಷ್ಟ್ರೀಯ ಸಹಕಾರ ಎಷ್ಟೊಂದು ಅಗತ್ಯ ಎನ್ನುವುದು. ಮಾನವ ಪ್ರಗತಿಯ ಹಾದಿಯಲ್ಲಿ ಹೊಸ ಹೊಸ ಸಾಧನೆಗಳನ್ನು ಕಾರ್ಯರೂಪಕ್ಕೆ ತರುವಾಗ ಗಂಡಾಂತರಗಳ ಸಂಭವವಿದ್ದೇ ಇರುತ್ತದೆ. ಇದರಿಂದಾಗಿ ಮಾನವಕುಲಕ್ಕಾಗುವ ಹಾನಿಯನ್ನು ಮುಖ್ಯವಾಗಿ ಜೀವ ಹಾನಿಯನ್ನು ಸಾಧ್ಯವಾದಷ್ಟು ಕಡಿಮೆ ಮಾಡಲು ಸರ್ವಪ್ರಯತ್ನ ನಡೆಯಬೇಕು. ಅಂತರ್ರಾಷ್ಟ್ರೀಯ ಸಹಕಾರದಿಂದ ಇದನ್ನು ಸುಲಭವಾಗಿ ಸಾಧಿಸಬಹುದು.

ಚೆರ್ನೋಬಿಲ್‌ನ ಅಪಘಾತದ ಬಗ್ಗೆ ಹಾಹಾಕಾರವೆಬ್ಬಿಸುತ್ತಿರುವವರು ಈ ಎರಡು ಅಂಶಗಳ ಬಗ್ಗೆ ಚಕಾರವೆತ್ತುವುದಿಲ್ಲ. ಅವರಿಗೆ ಪರಮಾಣು ವಿಕಿರಣದಿಂದ ಸಾರ್ವಜನಿಕ ಆರೋಗ್ಯಕ್ಕೆ ಕೇಡಾಗುತ್ತದೆಯೆಂಬ ಬಗ್ಗೆ ಪ್ರಾಮಾಣಿಕವಾದ ಕಾಳಜಿಯಿದ್ದಿದ್ದರೆ ಸೋವಿಯೆತ್ ಒಕ್ಕೂಟ ಏಕಪಕ್ಷೀಯವಾಗಿ ತಾನು ಅಣುಸ್ಫೋಟ ನಡೆಸುವುದಿಲ್ಲ ಎಂದು ಸ್ವಯಂ ನಿರ್ಬಂಧ ಹೇರಿಕೊಂಡು ಒಂದು ವರ್ಷದ ವರೆಗೆ ಅದನ್ನು ಪಾಲಿಸಿಕೊಂಡು ಬರುತ್ತಿದ್ದರೂ ಕೆಲವು ವಾರಗಳ ಹಿಂದೆ ನೆವಾಡಾದಲ್ಲಿ ಅಮೆರಿಕಾ ಅಣುಸ್ಫೋಟ ನಡೆಸಿದಾಗಯೂ ಸುಮ್ಮನಿದ್ದರು ? ಆದ್ದರಿಂದ ಈ ರೀತಿ ಗುಲ್ಲೆಬ್ಬಿಸುತ್ತಿರುವವರು ಯಾವ ಪಟ್ಟಭದ್ರ ಹಿತಾಸಕ್ತಿಗಳ ಹಸ್ತಕರು ಅಥವಾ ಮುಖವಾಣಿಗಳು ಎನ್ನುವುದು ಸುಸ್ಪಷ್ಟ. ಸಾಮ್ರಾಜ್ಯಶಾಹಿಗಳ ಈ ಕುತಂತ್ರವನ್ನು ಅರಿಯುವ ಪಕ್ವತೆ ಈಗ ವಿಶ್ವದ ಶಾಂತಿ ಹೋರಾಟಗಾರರಲ್ಲಿದೆ.

—ಕೆ. ವಿ.

# ಜನಾರ್ಧನ ಪೂಜಾರಿ ವಿರುದ್ಧ ಆರೋಪ ?

ಸಾಲ ಮೇಳದ ಮೂಲಕ ಜಗತ್ ಪ್ರಖ್ಯಾತಿ ಪಡೆಯಲು ಪ್ರಯತ್ನ ಮಾಡುತ್ತಿರುವ ಕೇಂದ್ರದ ವಿತ್ತ ಖಾತೆ ಸಚಿವ ಜನಾರ್ಧನ ಪೂಜಾರಿಯವರು ಕೋಟ್ಯಾವಧಿ ರೂಪಾಯಿ ಅಕ್ರಮಗಳಿಗೆ ಹೊಣೆಗಾರರಾಗಿರುವ ಬ್ಯಾಂಕ್ ಮ್ಯಾನೇಜರ್‌ರೊಬ್ಬರ ವಿರುದ್ಧ ಶಿಸ್ತಿನ ಕ್ರಮಕ್ಕೈಗೊಳ್ಳದಂತೆ ತಡೆ ಹಿಡಿದರೆಂಬ ಆರೋಪ ಕೇಳಿ ಬರುತ್ತಿದೆ. ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾದ ಬೊಕಾರೋ ಸ್ಟೀಲ್ ನಗರ ಶಾಖೆಯ ಮ್ಯಾನೇಜರರು ಸುಮಾರು ಹತ್ತು ಕೋಟಿ ರೂ. ಗಳನ್ನು ಒಳಗೊಂಡಿರುವ ಅಕ್ರಮಗಳಿಗೆ ಹೊಣೆಗಾರರಾಗಿದ್ದಾರೆಂದೂ, 1980 ರಲ್ಲಿ ಅದು ಪತ್ತೆಯಾಗಿ ಬ್ಯಾಂಕ್ ನಿರ್ದೇಶಕ ಮಂಡಳಿ, ಮ್ಯಾನೇಜರರ ವಿರುದ್ಧ ಶಿಸ್ತಿನ ಕ್ರಮಕ್ಕೆ ಶಿಫಾರಸ್ ಮಾಡಿದಾಗ ಪೂಜಾರಿಯವರ ಹಸ್ತಕ್ಷೇಪದಿಂದಾಗಿ ಅದನ್ನು ತಡೆ ಹಿಡಿಯಲಾಗಿದೆಂದೂ ಆರೋಪಿಸಲಾಗಿದೆ. ಸರಕಾರಿ ವಲಯದಲ್ಲಿರುವ ಬ್ಯಾಂಕುಗಳು ಪ್ರತಿವರ್ಷ ಇನ್ನೂರು ರೂ. ಗಳಿಗೂ ಹೆಚ್ಚಿನ ಮೊತ್ತದ ಸಾಲಗಳನ್ನು ಮನ್ನಾ ಮಾಡುತ್ತಿವೆಂದು ಹೇಳಲಾಗುತ್ತಿದೆ. ಬ್ಯಾಂಕಿನ ಹಣ ಬಡವರಿಗೆ ಲಭ್ಯವಾಗಬೇಕೆಂದು ಹೇಳುವ ಜನಾರ್ಧನ ಪೂಜಾರಿಯವರು ಮೇಲಿನ ಆರೋಪಗಳಿಗೆ ಉತ್ತರಿಸುವರೇ ?

○

# ರೈತರ ಶೋಷಣೆ ನಿಲ್ಲಲಿ

(1ನೇ ಪುಟದಿಂದ)

ಅದೀಗ 13 ಸಾವಿರ ಕೋಟಿ ಮೀರಿದೆ. ಅತಿಪ್ರಸರಣ, ಹೆಚ್ಚಿನ ಕರಭಾರ, ರೈತನ ಬೆಳೆಗೆ ನ್ಯಾಯ ಬೆಲೆ ನಿರಾಕರಿಸಿ, ಸರ್ಕಾರ ಬಿಕ್ಕಟ್ಟಿನ ಭಾರವನ್ನು ರೈತರ ಮೇಲೆ ಹೊರಿಸುವ ಪಣ ತೊಟ್ಟಿದೆ. ಮೂಲಭೂತ ಧೋರಣೆಗಳಲ್ಲಿ ಯಾವುದೇ ಬದಲಾವಣೆಯಿಲ್ಲದಿದ್ದರೂ ರಾಜೀವ್ ಗಾಂಧಿ ಸರ್ಕಾರ ಗುತ್ತೇದಾರಿ ಮನೆತನಗಳಿಗೆ ಸವಲತ್ತು ಒದಗಿಸಿ, 21ನೇ ಶತಮಾನಕ್ಕೆ ಕಾಲಿಡುವ ನೆಪದಲ್ಲಿ, ನಮ್ಮ ಆರ್ಥಿಕದ ಮೇಲೆ ಆಕ್ರಮಣ ಮಾಡಲು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶದ ಬಾಗಿಲನ್ನು ತೆರೆದಿಟ್ಟಿದ್ದಾರೆ. ಗರೀಬಿ ಹಟಾವೊ, ಭೂ ಸುಧಾರಣೆ ಮೊದಲಾದ ಘೋಷಣೆಗಳ ಬದಲಾಗಿ ತಂತ್ರಜ್ಞಾನ, ಹೆಚ್ಚು ಉತ್ಪಾದನೆ, ಉತ್ತಮ ದುಡಿತದಂತ ಘೋಷಣೆಗಳು ಪ್ರಾಮುಖ್ಯತೆ ಪಡೆದಿವೆ. ವ್ಯಾಪಾರವನ್ನು ಸಡಿಲಗೊಳಿಸಲಾಗಿದೆ. ಅದೇ ಸಮಯದಲ್ಲಿ ಡೀಸಲ್, ಪೆಟ್ರೋಲ್, ರಸಾಯನಿಕ ಗೊಬ್ಬರಗಳ ಬೆಲೆ ಹೆಚ್ಚಿಸಲಾಗಿದೆ. ಯೋಜನೆಗೆ ಹಣ ಬೇಕೆಂಬ ನೆಪದಿಂದ ಬೆಲೆ ಹೆಚ್ಚಿಸಿ ಬಡವರ ಸಂಕಷ್ಟಗಳನ್ನು ಕೈಮೀರುವಂತೆ ಮಾಡಲಾಗಿದೆಂದು ಆರೋಪಿಸಿದರು.

ಈ ಕಾರಣದಿಂದಾಗಿ ರೈತ ಸಮೂಹದಲ್ಲಿ ಅಸಮಧಾನ ಅಪಾರವಾಗಿ ಬೆಳೆಯುತ್ತಿದೆ. ಬಲಿಷ್ಟವಾದ ರೈತ ಚಳುವಳಿಯ ಅಭಾವದ ಕಾರಣದಿಂದಾಗಿ, ಈ ಶಕ್ತಿಯನ್ನು ಭೂಮಾಲಕರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ಎಚ್ಚರಿಸಿದರು.

ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಕಾಂಗ್ರೆಸ್ ಸರ್ಕಾರಗಳಿಗಿಂತ ಪ. ಬಂಗಾಲ ತ್ರಿಪುರಾದ ಎಡರಂಗ ಸರ್ಕಾರಗಳು ಸಂವಿಧಾನಾತ್ಮಕವಾಗಿ ಹೆಚ್ಚಿನ ಅಧಿಕಾರ ಪಡೆಯದಿದ್ದರೂ ರೈತರ ಸಲುವಾಗಿ ಹಲವಾರು ಒಳ್ಳೆ ಕೆಲಸಗಳನ್ನು ಮಾಡಿ ತೋರಿಸಿವೆ. ಪ. ಬಂಗಾಲದಲ್ಲಿ 14 ಲಕ್ಷದಷ್ಟು ರೈತರಿಗೆ ಭೂಮಿ ಹಂಚಲಾಗಿದೆ. 13 ಲಕ್ಷಕ್ಕೂ ಮಿಕ್ಕಿ ಗೇಣಿದಾರರನ್ನು ರಿಜಿಸ್ಟರ್ ಮಾಡಿ ಅವರಿಗೆಲ್ಲ ಬ್ಯಾಂಕಿನ ಸಾಲ ಒದಗಿಸಲಾಗಿದೆ, ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ ನಿರ್ಧರಿಸಲಾಗಿದೆ. ತ್ರಿಪುರದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೈತರಿಗೆ ಭೂಮಿ ಕೊಡಲಾಗಿದೆ. ಕನಿಷ್ಟ ವೇತನ ಕೊಡಲಾಗುತ್ತಿದೆ. ಟೆನೆಂಟುಗಳನ್ನು ರಿಜಿಸ್ಟರ್ ಮಾಡಲಾಗಿದೆಂದು ಹೇಳಿದರು.

ಜಗತ್ತಿನಾದ್ಯಂತ ಶಾಂತಿ ಚಳುವಳಿ ಬೆಳೆದು ಬರುತ್ತಿದೆಂದೂ, ಸಾಮ್ರಾಜ್ಯಶಾಹಿ ವಿರೋಧಿ ಪರಂಪರೆ ಹೊಂದಿರುವ ನಮ್ಮ ಸಂಘಟನೆ ಶಾಂತಿಗಾಗಿ ಹೋರಾಡುತ್ತಿರುವ ಶಕ್ತಿಗಳೊಡನೆಸೇರಿಕೊಂಡು ಯುದ್ಧದ ವಿರುದ್ಧ ಶಾಂತಿಗಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಜನರಿಗಾಗಿ ದುಡಿಯುವಂತೆ ರೈತ ಸಮುದಾಯವನ್ನು ಸಿದ್ಧಗೊಳಿಸೋಣ, ಗುರಿಯತ್ತ ಧೈರ್ಯದಿಂದ ಮುಂದೆ ಸಾಗೋಣವೆಂದು ಸಾರಿ ಹೇಳಿದರು.

## ಡೊನೇಶನ್ ಕ್ಯಾಪಿಟೇಶನ್ ಫೀ ರದ್ದಾಗಲಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸಮಿತಿ ಸಭೆ ಜನತಾ ಸರಕಾರದ ಶಿಕ್ಷಣ ನೀತಿಯ ವಿರುದ್ಧ ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ಹೋರಾಡಬೇಕೆಂದು ಕರೆನೀಡಿದೆ.

1983 ರಲ್ಲಿ ಅಧಿಕಾರಕ್ಕೆ ಬಂದಾಗ ಖಾಸಗಿ ಶಾಲೆ-ಕಾಲೇಜುಗಳು ವಿದ್ಯಾರ್ಥಿಗಳಿಂದ ಕ್ಯಾಪಿಟೇಶನ್ ಫೀ, ಡೊನೇಶನ್ ಇತ್ಯಾದಿ ರೂಪದಲ್ಲಿ ಹಣಸಂಗ್ರಹಿಸುವುದನ್ನು ನಿಲ್ಲಿಸುತ್ತೇವೆಂದು ಸಾರಿದ್ದರು. ಆದರೆ ಆ ಆಶ್ವಾಸನೆ ಸುಳ್ಳಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕ್ಯಾಪಿಟೇಶನ್ ಫೀ ಮತ್ತು ಡೊನೇಶನ್ ಸಂಗ್ರಹಿಸುವ 6 ಹೊಸ ಶಿಕ್ಷಣ ಸಂಸ್ಥೆಗಳಿಗೆ ಜನತಾ ಸರಕಾರ ಅವಕಾಶ ಮಾಡಿಕೊಟ್ಟಿದೆ. ಶಾಲೆ ಕಾಲೇಜುಗಳು ಜೂನ್‌ತಿಂಗಳಲ್ಲಿ ಪ್ರಾರಂಭವಾಗುವಾಗ ಡೊನೇಶನ್ ಕ್ಯಾಪಿಟೇಶನ್ ಮತ್ತಿನ್ನಿತರ ಫೀಗಳೆಷ್ಟು ಕೊಡಬೇಕಾದೀತೆಂಬುದರ ಕುರಿತು ವಿದ್ಯಾರ್ಥಿಗಳೂ ಪಾಲಕರೂ ಚಿಂತೆಗೊಳಗಾಗಿದ್ದಾರೆ. ಜನತಾ ಸರಕಾರ ಅದರ ಕುರಿತು ಏನು ಮಾಡುತ್ತಿದೆಂದು ಸಿ. ಪಿ. ಐ. (ಎಂ) ಜನತಾ ಸರಕಾರವನ್ನು ಕೇಳುತ್ತಿದೆ.

ಆದ್ದರಿಂದ ಜನತಾ ಸರಕಾರದ ಈ ಶಿಕ್ಷಣ ನೀತಿಯ ವಿರುದ್ಧ ಎಲ್ಲರೂ ಹೋರಾಡಬೇಕೆಂದು ಸಿ. ಪಿ. ಐ.(ಎಂ) ಕರೆ ಕೊಡುತ್ತದೆ.

# ಮಹಿಳಾ ಕಾರ್ಮಿಕರೇ ಎಚ್ಚರಗೊಳ್ಳಿರಿ

ಸ್ವಾತಂತ್ರ್ಯ ಬಂದು 39 ವರ್ಷಗಳಾದರೂ ದುಡಿಯುವ ಮಹಿಳೆಯರಿಗೆ ಸಂಸಮಾನ ವೇತನ ಸಿಗುತ್ತಿಲ್ಲ, ಬಾಲವಾಡಿಗಳ ವ್ಯವಸ್ಥೆಯಿಲ್ಲ, ಮಹಿಳೆಯರಿಗೆ ಸಿಗಬೇಕಾದ ಇತರ ಸೌಲಭ್ಯಗಳನ್ನು ನಿರಾಕರಿಸಲಾಗುತ್ತಿದೆ ಕಾರಣ ಸಿ ಐ. ಟಿ ಯು ದುಡಿಯುವ ಮಹಿಳೆಯರ ಅಗತ್ಯ ಬೇಡಿಕೆಗಳಿಗಾಗಿ ಹೋರಾಡಬೇಕೆಂದೂ, ದುಡಿಯುವ ಮಹಿಳೆಯರೂ ಕೂಡ ತಾವಿರುವ ಕಾರ್ಮಿಕ ಸಂಘಗಳಲ್ಲಿ ಪುರುಷರ ಜೊತೆಯಲ್ಲಿ ಸರಿಸಮಾನರಾಗಿ ದುಡಿಯಲು ಮುಖಂಡತ್ವವಹಿಸಲು ಮುಂದೆ ಬರಬೇಕೆಂದು, ಅಖಿಲ ಭಾರತ ಪ್ರಜಾ ಸತ್ತಾತ್ಮಕ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಹಾಗೂ ಸಿ ಐ ಟಿ ಯು ಮುಖಂಡರಾದ ವಿಮಲ್ ರಣದಿವೆಯವರು ಇತ್ತೀಚೆಗೆ ಬೆಂಗಳೂರು ಕೃಷ್ಣರಾಜಪುರ ಪ್ರದೇಶದಲ್ಲಿರುವ ಮಹಿಳಾ ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡುತ್ತಾ ಕರೆ ನೀಡಿದರು.

ಈಗ ರಾಜೀವ ಗಾಂಧಿಯವರ ಆರ್ಥಿಕ ನೀತಿಯಿಂದಾಗಿ, ಕಂಪ್ಯೂಟರೀಕರಣ, ಆಧುನೀಕರಣಕ್ಕೆ ಪ್ರಥಮ ಬಲಿಪಶು ಆಗುವವರು ಮಹಿಳಾ ಕಾರ್ಮಿಕರೆಂದೂ, ಈಗಾಗಲೇ ಬಟ್ಟೆ ಗಿರಣಿ ತಂಬಾಕು ಮತ್ತಿನ್ನಿತರ ಕೈಗಾರಿಕೆಗಳಲ್ಲಿ ಮಹಿಳೆಯರಿಗೆ ಬಾಣಂತಿರಜ, ಕ್ರೇಚಿ ವ್ಯವಸ್ಥೆಗಳನ್ನು ಒದಗಿಸಬೇಕಾಗುವುದರಿಂದ ಮಹಿಳೆಯರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿದೆಂದೂ ಆರೋಪಿಸಿದರು. ಯಂತ್ರೀಕರಣದಿಂದಾಗಿ ಇತ್ತೀಚೆಗೆ ಆಂದ್ರ ಪ್ರದೇಶದಲ್ಲಿ ತಂಬಾಕು ಕೈಗಾರಿಕೆಯಲ್ಲಿ ದುಡಿಯುವ ಮಹಿಳೆಯರು ಕೆಲಸ ಕಳೆದುಕೊಂಡಾಗ ತಾವು ಆ ಮಹಿಳೆಯರನ್ನೆಲ್ಲ ಕಳೆದು ಕೊಂಡು ದಿಲ್ಲಿಯಲ್ಲಿ ರಾಜೀವ ಗಾಂಧಿಯವರಿಗೆ ಮನವಿ ಸಲ್ಲಿಸಿದಾಗ, ಅವರು ಆಧುನೀಕರಣ ಯಂತ್ರೀಕರಣವನ್ನು ಸಮರ್ಥಿಸಿ ದುಡಿಯುವ ಮಹಿಳೆಯರ ಸಂಕಷ್ಟಕ್ಕೆ ಪರಿಹಾರ ಒದಗಿಸಲು ನಿರಾಕರಿಸಿದರೆಂದೂ ಹೇಳಿದರು. ಇಂದು ಬೆಲೆಗಳು ಗಗನಕ್ಕೇರುತ್ತಿರುವಾಗ ಮಹಿಳೆಯರಿಗೆ ಉದ್ಯೋಗವಿಲ್ಲದಿದ್ದರೆ ಸಂಸಾರ ನೀಗಿಸಿಕೊಂಡು ಹೋಗುವುದೇ ಕಷ್ಟಕರವೆಂದು ಹೇಳಿ ಇಂಥ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಹೋರಾಡಬೇಕೆಂದು ಹೇಳಿದರು.

ಸಿ ಐ ಟಿ ಯು ಜನರಲ್ ಕೌನ್ಸಿಲ್ ಸದಸ್ಯರಾದ ಕುರ್ಶೀದಾ ಬೇಗಂ ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಎಸ್. ಎಫ್. ಐ. ಮುಖಂಡರಾದ ಶಾಂತ ಕುಮಾರಿಯವರು ಮಹಿಳೆಯರ ಸಂಘಟನೆಯ ಅಗತ್ಯವನ್ನು ಒತ್ತಿ ಹೇಳಿದರು.

ವರದಿ : ತೇಜಸ್ವಿನಿ

# ಕರ್ನಾಟಕಕ್ಕೆ ಮತ್ತೆ ಅನ್ಯಾಯ

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಅಗತ್ಯವಾದ ಸಂಪನ್ಮೂಲ ರೂಢಿಸಿಕೊಳ್ಳಲು ರಾಜ್ಯ ವಿದ್ಯುತ್ ಮಂಡಳಿಗೆ 60 ಕೋಟಿ ರೂ. ಗಳ ಮೊತ್ತವನ್ನು ಬಾಂಡ್‌ಗಳ ಮೂಲಕ ಸಂಗ್ರಹಿಸಲು, ಡೀಜಲ್ ಜನರೇಟರುಗಳ ಆಮದು ಮಾಡಲು ಕೇಂದ್ರ ಸರಕಾರ ಅನುಮತಿ ನೀಡದಿರುವುದು ಕರ್ನಾಟಕಕ್ಕೆ ಮಾಡಿದ ಅನ್ಯಾಯವಾಗಿದೆ. ಈಗಾಗಲೇ ಎದುರಿಸುತ್ತಿರುವ ತೀವ್ರ ವಿದ್ಯುತ್‌ಶಕ್ತಿ ಅಭಾವಕ್ಕೆ ಇದು ಗಧಾಪ್ರಹಾರವಾಗಿದೆ. ಕೇಂದ್ರ ಸರಕಾರ ತನ್ನ ನೀತಿಯನ್ನು ಬದಲಾಯಿಸಿ ರಾಜ್ಯ ವಿದ್ಯುತ್ ಮಂಡಳಿಯ ಬೇಡಿಕೆಗೆ ಮಂಜೂರಿ ನೀಡಬೇಕೆಂದು ಸಿ.ಪಿ.ಐ.(ಎಂ) ಒತ್ತಾಯಿಸುತ್ತದೆ.

ಕೇಂದ್ರದ ರೇಲ್ವೆ ಮಂತ್ರಿ ಬೆಂಗಳೂರಿಗೆ ಬಂದು ಹೋದರು. ಹಣದ ಕೊರತೆ ಇರುವುದರಿಂದ 7ನೇಯೋಜನೆಯಲ್ಲಿ ಯಾವ ಹೊಸ ರೈಲ್ವೇ ಮಾರ್ಗಗಳನ್ನು ಕೈಗೊಳ್ಳುವುದಿಲ್ಲೆಂದು ಸಾರಿದ್ದಾರೆ. ಬೆಂಗಳೂರು-ಮೈಸೂರ ರೈಲ್ವೆ ಮಾರ್ಗವನ್ನು ಬ್ರಾಡ್‌ಗೇಜಿಗೆ ಮಾರ್ಪಡಿಸಲು ರೂ. 56 ಕೋಟಿ ಬೇಕಾಗಿದ್ದು ಅದಕ್ಕೆ ಬರೇ ರೂ. 1 ಕೋಟಿ ಮೀಸಲಾಗಿದೆಂದು ಹೇಳಿರುವುದು ಖಂಡನೀಯ. ಕೊಂಕಣ ರೈಲ್ವೆ ಹುಬ್ಬಳ್ಳಿ-ಕಾರವಾರ, ಬೆಂಗಳೂರು-ಮಿರಜ್ ಬ್ರಾಡ್‌ಗೇಜ್ ಪರಿವರ್ತನೆ, ಬೆಂಗಳೂರು ನಗರಕ್ಕೆ ಸುತ್ತುವರಿ ರೈಲ್ವೆ ಮತ್ತಿನ್ನಿತರ ಬೇಡಿಕೆಗಳನ್ನು ಕೈಬಿಡಲಾಗಿದೆಂದು ಹೇಳಿರುವುದು ಖಂಡನೀಯ.

ಜ್ವಲಂತ ಸಮಸ್ಯೆಗಳಿಗಾಗಿ ಹೋರಾಟ ನಡೆಸಬೇಕೆಂದು ರಾಜ್ಯಸಮಿತಿ ಎಲ್ಲಾ ಘಟಕಗಳಿಗೆ ಕರೆ ಕೊಟ್ಟಿದೆ.

## ವಂತಿಗೆ ರದ್ದತಿಗೆ ಎಸ್. ಎಫ್. ಐ. ಆಗ್ರಹ

ಖಾಸಗಿ ಶೈಕ್ಷಣಿಕ ಸಂಸ್ಥೆಗಳು ವಸೂಲು ಮಾಡುತ್ತಿರುವ ಕ್ಯಾಪಿಟೇಶನ್ ಹಾಗೂ ಡೊನೇಶನ್ ಫೀ ಯನ್ನು ರದ್ದುಪಡಿಸುವಂತೆ ಎಸ್. ಎಫ್. ಐ. ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಬೆಂಗಳೂರಿನಲ್ಲಿ ಈಚೆಗೆ ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಖಾಸಗಿಯವರು ಹಣ ಮಾಡುವ ವ್ಯಾಪಾರ ಹಾಗೂ ಪಾಲಕರ ಅಸಹಾಯಕ ಪರಿಸ್ಥಿತಿಯ ಬಗ್ಗೆ ಎಸ್. ಎಫ್. ಐ. ತೀವ್ರ ಕಳವಳ ವ್ಯಕ್ತಪಡಿಸಿದೆ.

## ಓದುಗರಲ್ಲಿ ವಿನಂತಿ

ಪೇಪರಿನ ಬೆಲೆ ಮತ್ತಿತರ ಖರ್ಚು ಹೆಚ್ಚಾಗಿರುವುದರಿಂದ ಈ ವಾರದಿಂದ ಪತ್ರಿಕೆಯ ಬೆಲೆಯನ್ನು 80 ಪೈಸೆಗೆ ಏರಿಸಲಾಗಿದೆ. ಓದುಗರು ಸಹಕರಿಸಬೇಕೆಂದು ವಿನಂತಿ.

— ಸಂಪಾದಕ ಮಂಡಳಿ

ಐಕ್ಯರಂಗ ವಾರಪತ್ರಿಕೆ

| | |
|---|---|
| ವಾರ್ಷಿಕ ಚಂದಾ | ರೂ. 40 |
| ಅರ್ಧ ವರ್ಷ | ರೂ. 20 |

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N K. Upadhyaya